# ಅಧ್ಯಯನ – 13 Study XIII

# ಪಾಪ ಪರಿಹಾರದ ಮೂಲಕ ಪಡಕೊಂಡ ನಿತ್ಯಜೀವ ಮತ್ತು ನಿರ್ಲಯತ್ವ ಇವುಗಳ ಪರೀಕ್ಷೆ

## Hopes for Life Everlasting and Immortality Secured by The Atonement

**ನರಳಾಡುತ್ತಿರುವ ಸೃಷ್ಟಿಗಳ ಮನಃಪೂರ್ವಕ ಅಪೇಕ್ಷೆಗಳು ಅಥವಾ ನಿರೀಕ್ಷೆಗಳು – ಇವುಗಳು ಸಾಕ್ಷ್ಯಗಳಲ್ಲ – ಪಾಪ ನಿವೃತ್ತಿಯ ವಾಗ್ದಾನಗಳು ಮತ್ತು ಶ್ರಮದ ಕೆಲಸಗಳು ಸಾಕ್ಷಿಗಳಾಗಿ – ಭಿನ್ನತೆ ಮತ್ತು ವ್ಯತ್ಯಾಸ – ಮಾನವ ಆತ್ಮವು ನಿರ್ಲಯವಾದುದೋ? ಅಥವಾ ನಿರ್ಲಯವಾಗುವ ನಿರೀಕ್ಷೆ ಅದಕ್ಕುಂಟೋ? – ದೇವದೂತರುಗಳು ನಿರ್ಲಯತ್ವ ಹೊಂದಿರುವರೋ? – ಸೈತಾನನು ನಿರ್ಲಯತ್ವವುಳ್ಳವನೋ? – ಸುವಾರ್ತೆಯ ಮೂಲಕ ಜೀವ ಮತ್ತು ನಿರ್ಲಯತ್ವಗಳು ಬೆಳಕಿಗೆ ಬಂದಿವೆ – ದೇವರ ವಾಕ್ಯದಲ್ಲಿ ನಿರ್ಲಯ ಮತ್ತು ನಿರ್ಲಯತ್ವವಾಗಿ ತರ್ಜುಮೆಗೊಂಡಿರುವ ಗ್ರೀಕ್ ಪದ – ಸಭೆಯ ನಿರೀಕ್ಷೆ ಮತ್ತು ರಕ್ಷೆಹೊಂದಿದ ಲೋಕದ ನಿರೀಕ್ಷೆ ಇವುಗಳು ಯಾವುದರಲ್ಲಿ ಭಿನ್ನವಾಗುತ್ತವೆ ? .**

**"ಒಬ್ಬ ಮನುಷ್ಯನು ಸತ್ತು ಪುನಃ ಬದುಕಾನೇ? ಹಾಗಾಗುವುದಾದರೆ ನನಗೆ ಬಿಡುಗಡೆಯಾಗುವವರೆಗೆ ನನ್ನ ವಾಯಿದೆಯ ದಿನಗಳಲ್ಲೆಲ್ಲಾ ಕಾದುಕೊಂಡಿರುವೆನು"** (ಯೋಬ 14:14)

**"ನಮ್ಮ ರಕ್ಷಕನಾದ ಕ್ರಿಸ್ತ ಯೇಸು . . . . . . ಮರಣವನ್ನು ನಿವೃತ್ತಿಮಾಡಿ ಸುವಾರ್ತೆಯ ಮೂಲಕ ಜೀವವನ್ನೂ ನಿರ್ಲಯತ್ವವನ್ನೂ ಪ್ರಕಾಶಗೊಳಿಸಿದನು"** (2 ತಿಮೋ. 1:10)

"ಮರಣವು ಎಲ್ಲಾ ಇರುವಿಕೆಯನ್ನು ಅಂತ್ಯಗೊಳಿಸುವುದಿಲ್ಲ" ಎಂಬ ಹೆಬ್ಬಯಕೆಯುಳ್ಳ ನಿರೀಕ್ಷೆಯು ಮಾನವರೊಳಗಿದೆ. ಈಗ ಪ್ರಾರಂಭವಾದ ಜೀವನವು ಹೇಗೋ, ಎಲ್ಲಿಯೋ, ಮುಂದುವರೆಯುತ್ತದೆ ಎಂಬ ಅಸ್ಪಷ್ಟವಾದ ನಿರೀಕ್ಷೆಯೊಂದು ಸದಾ ಇದ್ದೇ ಇದೆ. ಕೆಲವರಲ್ಲಿ ಈ ನಿರೀಕ್ಷೆಯು ಹೆದರಿಕೆಯಾಗಿ ಮಾರ್ಪಾಡಾಗುತ್ತದೆ. ಸಂತೋಷ ಭರಿತವಾದ ಭವಿಷ್ಯಕ್ಕೆ ತಮ್ಮ ಅಯೋಗ್ಯತೆಯನ್ನು ಗ್ರಹಿಸಿಕೊಂಡು ಅನೇಕರು ಮುಂದಣ ಗೋಳಾಟಕ್ಕಾಗಿ ಅಂಜುತ್ತಾರೆ; ಅವರು ತಮಗಾಗಿ ಮತ್ತು ಇತರರಿಗಾಗಿ ಎಷ್ಟು ಹೆಚ್ಚಾಗಿ ದಿಗಿಲುಬೀಳುತ್ತಾರೋ ಅಷ್ಟೇ ಹೆಚ್ಚಾಗಿ ಅದನ್ನು ನಂಬುತ್ತಾರೆ.

ಭವಿಷ್ಯ ಜೀವನದ ಈ ಅಸ್ಪಷ್ಟವಾದ ನಿರೀಕ್ಷೆಯು ಮತ್ತು ಅದರ ಪ್ರತಿರೂಪವು, ಅಂಜಿಕೆಯು, ನಿಸ್ಸಂದೇಹವಾಗಿ ಆದಾಮನ ಪಾಪಕ್ಕೂ, ಅದರ ಫಲವಾದ ಮರಣ ದಂಡನೆಗೂ ಒಳಗಾದಾಗ **"ಆ ಸ್ತ್ರೀಯ ಸಂತಾನವು ನಿನ್ನ ತಲೆಯನ್ನು ಜಜ್ಜುವುದು, ನೀನು ಅದರ ಹಿಮ್ಮಡಿಯನ್ನು ಕಚ್ಚುವಿ"** (ಆದಿಕಾಂಡ 3:15) ಎಂಬುದಾಗಿ ದೇವರು ಸರ್ಪಕ್ಕೆ ನೀಡಿದ ಶಾಪದಲ್ಲಿ ತನ್ನ ಮೂಲವನ್ನು ಹೊಂದಿದೆ. ಇದು ನಿಸ್ಸಂದೇಹವಾಗಿ ಆದಾಮನ ಕುಟುಂಬದಲ್ಲಿ ಕನಿಷ್ಟಪಕ್ಷ ಕೆಲವರಾದರೂ ಸೈತಾನನ ಮೇಲೆ, ಮತ್ತು ಆತನು ಅವರನ್ನು ಮರಳುಗೊಳಿಸಿದ ಪಾಪ ಮತ್ತು ಮರಣದ ಮೇಲೆ ವಿಜಯವನ್ನು ಸಾಧಿಸುತ್ತಾರೆ ಎಂದು ಅರ್ಥಮಾಡಿಕೊಳ್ಳಲಾಗಿದೆ. ದೇವರು ನಿಸ್ಸಂದೇಹವಾಗಿ ಅಂಥಾಃ ನಿರೀಕ್ಷೆಯನ್ನು ಪ್ರೋತ್ಸಾಹಿಸುತ್ತಾನೆ, ಅದು ಅಸ್ಪಷ್ಟವಾಗಿದ್ದಾಗ್ಯೂ, ಆತನು ನೋಹ ಮತ್ತು ಹನೋಕರ ಮೂಲಕ ಮಾತನಾಡುತ್ತಾ ಆತನು **"ಇಗೋ! ಕರ್ತನು ಲಕ್ಷಾಂತರ ಪರಿಶುದ್ಧ ದೂತರೊಂದಿಗೆ ಬರುವನು"** ಎಂದು ಪ್ರವಾದಿಸಿದ್ದಾನೆ. ಆದರೆ 'ಮರಣದಿಂದ ರಕ್ಷಣೆ' ಎಂಬ ಸುವಾರ್ತೆಯು (ಶುಭ ವರ್ತಮಾನವು) ಎಲ್ಲಾ ಮಾನವ ಜಾತಿಯವರಿಗೂ ದೇವರ ಸೂಕ್ತ ಸಮಯದಲ್ಲಿ ದೊರೆಯಲಿದೆ ಎಂಬುದು ಮೊಟ್ಟಮೊದಲಿಗೆ ಅಬ್ರಹಾಮನಿಗೆ ಸ್ಪಷ್ಟವಾಗಿ ತಿಳಿಸಿದಂತೆ ತೋರಿಬರುತ್ತದೆ. ಅಪೋಸ್ತಲನು ಹೇಳುವುದೇನೆಂದರೆ – ಈ ಹಿಂದೆ ಅಬ್ರಹಾಮನಿಗೆ **"ನೀನು ಆಶೀರ್ವಾದ ನಿಧಿಯಾಗುವಿ, ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದವುಂಟಾಗುವುದು"** (ಆದಿ. 12:3) ಎಂಬ ಸುವಾರ್ತೆಯು ಬೋಧಿಸಲ್ಪಟ್ಟಿತು. ಇದು ಯೆಹೂದ್ಯರ ಪುನರುತ್ಥಾನ ನಿರೀಕ್ಷೆಗೆ ಕನಿಷ್ಟಪಕ್ಷ ಒಂದು ತಳಹದಿಯಾಗಿತ್ತು. ಲೋಕದ ಅನೇಕ ಕುಟುಂಬಗಳು ಈಗಾಗಲೇ ಮರಣ ಹೊಂದಿರುವಾಗ ಮತ್ತು ಮರಣಹೊಂದುತ್ತಿರುವಾಗ ಎಲ್ಲರಿಗೂ ನೀಡಲ್ಪಟ್ಟ ಈ ವಾಗ್ದತ್ತ ಆಶೀರ್ವಾದವು ಒಂದು ಭವಿಷ್ಯದ್ ಜೀವನದ ಅರ್ಥ ಕೊಡುವುದಾಗಿದೆ. ಶತಮಾನಗಳ ನಂತರ, ಬಾಬೇಲನ್ನು ವಶಪಡಿಸಿಕೊಂಡಾಗ ಇಸ್ರಾಯೇಲ್ಯರು ಎಲ್ಲಾ ದೇಶಗಳಲ್ಲಿಯೂ ಹರಡಿಕೊಂಡರು. ಅವರು ನಿಸ್ಸಂದೇಹವಾಗಿ ತಾವು ಹೋದ ಕಡೆಗೆಲ್ಲಾ ದೇವರ ವಾಗ್ದಾನದ ಮತ್ತು ಅವರ ನಿರೀಕ್ಷೆಯ ತುಣುಕುಗಳನ್ನು ತಮ್ಮೊಡನೆ ತೆಗೆದುಕೊಂಡು ಹೋದರು.

ನಿಶ್ಚಯವಾಗಿಯೂ ಇದು ಯೆಹೂದ್ಯ ಆಲೋಚನೆಗಳ ಬೆರೆಕೆಯ ಫಲವಾಗಿ ಬಂದುದಾಗಿರಲಿ, ಅಥವಾ ನಿರೀಕ್ಷೆಯು ಮಾನವ ಸ್ವಭಾವದ ಒಂದು ಅಂಶವಾಗಿರುವುದರಿಂದಾಗಲೀ ಅಥವಾ ಈ ಎರಡೂ ಆಗಲಿ, ಸಮಗ್ರ ಲೋಕವು ಭವಿಷ್ಯದ್ ಜೀವನವನ್ನು ನಂಬುತ್ತದೆ ಮತ್ತು ಹೆಚ್ಚುಕಡಿಮೆ ಎಲ್ಲರೂ ಇದು ನಿರಂತರವಾದುದು ಎಂದು ನಂಬುತ್ತಾರೆ. ಇದನ್ನೇ ಅಪೋಸ್ತಲನು **"ನರಳಾಡುವ ಸೃಷ್ಟಿಗಳ ಮನಃಪೂರ್ವಕ ಹಾರೈಕೆ"** ಎಂಬುದಾಗಿ ಕರೆಯುತ್ತಾನೆ. – [**"ಇದು ಮಾತ್ರವಲ್ಲದೆ ಪ್ರಥಮ ಫಲವಾಗಿರುವ ಪವಿತ್ರಾತ್ಮವರವನ್ನು ಹೊಂದಿದ ನಾವಾದರೋ ದೇವಪುತ್ರರ ಪದವಿಯನ್ನು ಅಂದರೆ ದೇಹಕ್ಕೆ ಬರಬೇಕಾದ ವಿಮೋಚನೆಯನ್ನು ಎದುರುನೋಡುತ್ತಾ ನಮ್ಮೊಳಗೆ ನರಳುತ್ತೇವೆ" (ರೋಮಾ. 8:23)**]. ಆದರೆ ಅಂಥಾ ನಿರೀಕ್ಷೆಗಳು ಈ ಸಿದ್ಧಾಂತದ ಸಾಕ್ಷ್ಯವಾಗುವುದಿಲ್ಲ. ಯೆಹೂದ್ಯರಿಗೆ ನೀಡಿದ ಈ ಹಳೆಒಡಂಬಡಿಕೆಯ ವಾಗ್ದಾನವು ಒಂದು ಸ್ಪಷ್ಟವಾದ ನಂಬಿಕೆಯ ರಚನೆಗೆ ಅಧಾರವಾಗಲು ಬಹು ಸಂದಿಗ್ಧವಾಗಿದೆ ಮತ್ತು ಈ ಪ್ರಸ್ತಾಪದ ಬಗ್ಗೆ ಶಾಸ್ತ್ರಾಧಾರವಾದ ಮತಧರ್ಮವೆನಿಸಿಕೊಳ್ಳಲು ಬಲು ಕಡಿಮೆಯಾಗಿದೆ.

ಹೊಸ ಒಡಂಬಡಿಕೆಯಲ್ಲಿ ನಮ್ಮ ಕರ್ತನ ಸ್ಪಷ್ಟವಾದ ಸಕರಾತ್ಮಕ ಹೇಳಿಕೆಗಳನ್ನು ಮತ್ತು ನಂತರದಲ್ಲಿ ಅಪೋಸ್ತಲರುಗಳ ಸ್ಪಷ್ಟವಾದ ಹೇಳಿಕೆಗಳನ್ನು ನಿತ್ಯಜೀವವೆಂಬ ಈ ಮಹತ್ವವಾದ ಪ್ರಸ್ತಾಪದ ಬಗ್ಗೆ ಕಂಡುಕೊಳ್ಳುವವರೆಗೆ ನಾವು ಈ ಅಸ್ಪಷ್ಟವಾದ ಹೇಳಿಕೆಗಳನ್ನು ಸಕಾರಾತ್ಮಕ ನಿಶ್ಚಿತಾಭಿಪ್ರಾಯವನ್ನಾಗಿ ಮಾಡಿಕೊಳ್ಳಲಾಗಲಿಲ್ಲ. ಅವರ ಮಾತುಗಳಲ್ಲಿ ಸರ್ವರಿಗೂ ಭವಿಷ್ಯದ್ ಜೀವನವೊಂದರ ಸಾಧ್ಯತೆಗಳು ಇವೆ ಎಂಬ ಸಕಾರಾತ್ಮಕವಾದ ಹೇಳಿಕೆಗಳು ಮಾತ್ರವಲ್ಲ, ಅದರ ಸತ್ಯತೆಯ ವೇದಾಂತವು ಮತ್ತು ಅದನ್ನು ಪಡಕೊಳ್ಳುವುದು ಮತ್ತು ಅದನ್ನು ಕಾಪಾಡಿಕೊಳ್ಳುವುದು ಹೇಗೆ ಎಂಬುದು ಇಲ್ಲಿ ತಿಳಿಸಿರುವಂತೆ ಬೇರೆಲ್ಲೂ ತಿಳಿಸಿಲ್ಲ.

ಹಲವರು ಈ ಅಂಶಗಳನ್ನು ಗಮನಿಸಿಲ್ಲ. ಆದುದರಿಂದ ಅವರು ನಂಬಿಕೆಯಲ್ಲಿ ದೃಢವಿಲ್ಲದವರಾಗಿದ್ದಾರೆ. ಈ ತತ್ವಜ್ಞಾನ ಏನೆಂಬುದನ್ನು ನಾವು ನೋಡೋಣ ಮತ್ತು ಭವಿಷ್ಯದ್ ಜೀವನವು, ನಿತ್ಯನಿರಂತರವಾದ ಜೀವಿತವು ನಮ್ಮ ಮಹಾ ಜ್ಞಾನಿಯಾದ ಸೃಷ್ಟಿಕರ್ತನ ಒದಗಿಸುವಿಕೆಯಾಗಿದೆ ಮತ್ತು ಎಲ್ಲರಿಗೂ ಇದು ದೊರೆಯಬಹುದಾಗಿದೆ ಎಂಬುದರ ಬಗ್ಗೆ ಹೆಚ್ಚು ಭರವಸದಿಂದಿರೋಣ.

ನೂತನ ಒಡಂಬಡಿಕೆಯ ಈ ನಿತ್ಯಜೀವದ ಭರವಸೆಯ ತಳಹದಿಯ ಮೂಲದಲ್ಲಿ ನಿತ್ಯಜೀವವನ್ನು ಉಂಟುಮಾಡುವ ನಿರೀಕ್ಷೆಯನ್ನು ಕೂಡುವಂತಹ ಯಾವುದೇ ಅಂಶವು ನಮ್ಮ ಒಳಗೆ ಇಲ್ಲವೆಂಬುದಾಗಿ ಎಚ್ಚರಿಸುತ್ತದೆ ಎಂಬುದಕ್ಕೆ ಅಚ್ಚರಿಪಡುತ್ತೇವೆ. – ಯಾಕೆಂದರೆ, ನಮ್ಮ ಮೂಲ ಪಿತೃವಾದ ಆದಾಮನ ಅವಿಧೇಯತೆಯ ನಿಮಿತ್ತ ನಮ್ಮ ಜನಾಂಗದ ಜೀವಿತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಆದಾಮನು ಸದಾ ಜೀವಿಸುವಂತೆ ಪರಿಪೂರ್ಣನಾಗಿ ಉಂಟುಮಾಡಲ್ಪಟ್ಟರೂ, ಆತನ ಪಾಪವು ಅವನಿಗೆ 'ಪಾಪದ ಸಂಬಳವಾದ ಮರಣ'ವನ್ನು ತಂದುಕೊಟ್ಟಿದ್ದು ಮಾತ್ರವಲ್ಲ – ಆತನ ಮಕ್ಕಳು ಸಹಾ ಮರಣಹೊಂದುವ ಸ್ಥಿತಿಯಲ್ಲಿ ಹುಟ್ಟಿ ಮರಣ ಪ್ರಭಾವದಲ್ಲಿ ಬಾಧ್ಯಸ್ತರಾದರು. ದೇವರಂತೆಯೇ ದೇವರ ನಿಯಮಗಳೂ ಸಮರ್ಪಕವಾಗಿಯೇ ಅವೆ. ಅದರಂತೆ ಆತನ ಸೃಷ್ಟಿಯಾದ ಆದಾಮನೂ ಸಹಾ ಪಾಪಮಾಡುವ ಮೊದಲು ಸಮರ್ಪಕನಾಗಿಯೇ ಇದ್ದನು. ದೇವರ ವಿಷಯದಲ್ಲಿ "**ದೇವರು ಮಾಡುವ ಕಾರ್ಯದಲ್ಲಿ ಯಾವ ಕುಂದೂ ಇಲ್ಲ**" (ಧರ್ಮೋ. 32:4) ಎಂದು ಬರೆದದೆ. ದೇವರು ತನ್ನ ನಿಯಮದ ಮೂಲಕ ಯಾವುದು ಸಮರ್ಪಕವಾಗಿದೆಯೋ ಅದನ್ನು ಮಾತ್ರವೇ ಒಪ್ಪಿಕೊಳ್ಳುತ್ತಾನೆ ಮತ್ತು ಅಸಮರ್ಪಕವಾದ ಎಲ್ಲವುಗಳನ್ನು ನಾಶಗೊಳ್ಳುವಂತೆ ಖಂಡಿಸುತ್ತಾನೆ. ಆದುದರಿಂದ ಆದಾಮನ ಜನಾಂಗವು **"ಪಾಪದಲ್ಲಿ ಜನಿಸಿತು ಮತ್ತು ಅಪರಾಧಗಳಿಂದ ರೂಪಿಸಲ್ಪಟ್ಟಿತು"**. ಸುವಾರ್ತೆ ಅಥವಾ ಶುಭವರ್ತಮಾನ ಎಂದು ಕರೆಯಲ್ಪಡುವ ನೂತನ ಒಡಂಬಡಿಕೆಯಲ್ಲಿನ ಶರತ್ತುಗಳ ಹೊರತಾಗಿ ಅದಕ್ಕೆ ನಿತ್ಯಜೀವದ ನಿರೀಕ್ಷೆ ಇಲ್ಲವಾಯಿತು. ಅಂದರೆ ಪತನದಿಂದ ಸಮರ್ಪಕತೆಗೆ, ದೇವರ ಕೃಪೆಗೆ ಮತ್ತು ನಿತ್ಯಜೀವಕ್ಕೆ ಹಿಂತಿರುಗುವಿಕೆಯು ಕ್ರಿಸ್ತನ ಮೂಲಕ ಆದಾಮನ ಸಂತಾನದವರೆಲ್ಲರಿಗೂ ತೆರೆಯಲಾಯಿತು ಮತ್ತು ಅವರು ಅದನ್ನು ತಾವಾಗಿಯೇ ಪಡಕೊಳ್ಳುತ್ತಾರೆ.

ದೇವರೊಂದಿಗೆ ಪುನಃಸಂಧಾನ ನಿರೀಕ್ಷೆಯ ಮುಖ್ಯ ಅಭಿಪ್ರಾಯವು ಮತ್ತು ಆ ರೀತಿಯಲ್ಲಿ ನಿತ್ಯಜೀವನದ ನೂತನ ನಿರೀಕ್ಷೆ ಇವುಗಳು ಈ ಹೇಳಿಕೆಗಳಲ್ಲಿ ಕಂಡುಬರುತ್ತವೆ (1) **"ಕ್ರಿಸ್ತನು ನಮ್ಮ ಪಾಪಗಳ ಸಲುವಾಗಿ ಮರಣಹೊಂದನು"** (2) **"ಆತನು ನಮ್ಮ ನೀತಿ ನಿರ್ಣಯಕ್ಕಾಗಿ ಸತ್ತವರೊಳಗಿಂದ ಎದ್ದು ಬಂದನು"; "ಯಾಕೆಂದರೆ, ಮಾನವನಾದ ಕ್ರಿಸ್ತನು ಎಲ್ಲರಿಗೋಸ್ಕರ ತನ್ನನ್ನೇ ಈಡುಬಲಿಯಾಗಿ ಅರ್ಪಿಸಿದನು"**. ಆದಾಮ ಮತ್ತು ಆತನ ಸಂತಾನವು, ಆದಾಮನು ಪಾಪಮಾಡಿದಾಗ ಆತನಲ್ಲಿಯೇ ಇದ್ದುಕೊಂಡು ಸ್ವಾಭಾವಿಕವಾಗಿ ಆತನ ದಂಡನೆಯಲ್ಲಿ ಪಾಲುದಾರರಾದರು ; ಅವರುಗಳು ಕ್ರಿಸ್ತನ ಅಮೂಲ್ಯರಕ್ತದ ಮೂಲಕ ವಿಮೋಚಿಸಲ್ಪಟ್ಟರು – 1 ಪೇತ್ರ 1:19.

ಕರ್ತನ ಒದಗಿಸುವಿಕೆಯು ಸರ್ವರಿಗೂ ಹೇರಳವಾಗಿದ್ದರೂ, ಅದು ಯಾರಿಗಾದರೂ ಕೆಲವು ಶರತ್ತುಗಳು ಇಲ್ಲದೇ ಅನ್ವಯವಾಗುವುದಿಲ್ಲ (1) ಅವರು ಕ್ರಿಸ್ತನನ್ನು ತಮ್ಮ ವಿಮೋಚಕನೆಂದು ಅಂಗೀಕರಿಸಬೇಕು (2) ಅವರು ಪಾಪವನ್ನು ತಪ್ಪಿಸಿಕೊಳ್ಳಲು ಹೆಣಗಬೇಕು ಮತ್ತು ದೇವರೊಂದಿಗೆ ಮತ್ತು ನೀತಿಯೊಂದಿಗೆ ಸಾಮರಸ್ಯದಿಂದ ಜೀವಿಸಬೇಕು. ಈ ಕಾರಣದಿಂದ **"ದೇವರ ಉಚಿತಾರ್ಥ ವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ"** (ರೋಮಾ. 6:23) ಎಂದು ನಮಗೆ ಹೇಳಲ್ಪಟ್ಟಿದೆ. ಈ ಕೆಳಗಣ ದೇವರ ವಾಕ್ಯಗಳು ಈ ಪ್ರಸ್ತಾಪದ ಬಗ್ಗೆ ಬಲು ಸ್ಪಷ್ಟವಾಗಿವೆ :

**"ಆತನ ಮಗನ ಮೇಲೆ ನಂಬಿಕೆಯಿಡುವವನಿಗೆ ನಿತ್ಯಜೀವ ಉಂಟು''** (ಹಕ್ಕು ಅಥವಾ ಭಾಗ್ಯ ಅಥವಾ ದೇವರ ವರವಾಗಿ ದಯಪಾಲಿಸಲ್ಪಡುವ ಜೀವ); **''ಯಾವನು ಮಗನನ್ನು ನಂಬುವುದಿಲ್ಲವೋ ಅವನು (ಪರಿಪೂರ್ಣ) ಜೀವವನ್ನು ಕಾಣುವುದೇ ಇಲ್ಲ"** – ಯೋಹಾನ 3:36; 1 ಯೋಹಾನ 5:12.

ವಿಮೋಚಕನೂ, ಜೀವದಾಯಕನೂ ಆಗಿ ನೇಮಿಸಲ್ಪಟ್ಟವನಾದ ಕ್ರಿಸ್ತನ ಮೂಲಕವಾಗಿ ಅಲ್ಲದೆ ಯಾರೂ ನಿತ್ಯಜೀವವನ್ನು ಹೊಂದಿಕೊಳ್ಳಲಾರರು; ಸತ್ಯವು ನಾವು ನಂಬಿಕೆಯನ್ನೂ, ವಿಧೇಯತೆಯನ್ನೂ ಪ್ರಕಟಿಸುವ ಸೌಭಾಗ್ಯವನ್ನು ಉಂಟುಮಾಡುತ್ತದೆ ಮತ್ತು ಈ ರೀತಿಯಲ್ಲಿ ನಾವು ನಿತ್ಯಜೀವವನ್ನು ಹಿಡಿದುಕೊಳ್ಳುವವರಾಗಬೇಕು ಮತ್ತು ಇದಕ್ಕೆ **'ನಿತ್ಯಜೀವದ ಒರತೆ'** ಇಲ್ಲವೇ **'ಜೀವದ ರೊಟ್ಟಿ'**ಎಂಬುದಾಗಿ ಕರೆಯುತ್ತಾರೆ – ಯೋಹಾನ 4:14; 6:40, 54.

ಈ ನಿತ್ಯಜೀವವೆಂಬ ವರವು ಅದರ ಬಗ್ಗೆ ಮತ್ತು ಅದನ್ನು ವರವಾಗಿ ಪಡೆದುಕೊಳ್ಳಲು ಇರುವ ಶರತ್ತುಗಳ ಬಗ್ಗೆ ತಿಳುಕೊಳ್ಳುವಾಗ, ಅದನ್ನು ಬಯಸುವಾಗ, ಪವಿತ್ರತೆಯುಳ್ಳ ದೇವರಾತ್ಮಕ್ಕೆ ತಕ್ಕಂತೆ ಜೀವಿಸುವಾಗ ಮಾತ್ರವೇ ದಯಪಾಲಿಸಲ್ಪಡುವುದು. ಅವರು ಅದನ್ನು ಉಚಿತಾರ್ಥ ವರವಾಗಿ ಪಡಕೊಳ್ಳುವರು – ರೋಮಾ. 6:23, ಗಲಾತ್ಯ 6:8.

ಈ ನಿತ್ಯಜೀವವನ್ನು ಪಡಕೊಳ್ಳಲು ನಾವು ದೇವರ 'ಕುರಿ'ಗಳಾಗಿ ಕುರುಬನಾದ ಆತನ ಸ್ವರಕ್ಕೆ, ಆತನ ಸೂಚನೆಗಳಿಗೆ ಓಗೊಟ್ಟು ಆತನನ್ನು ಹಿಂಬಾಲಿಸ ಬೇಕಾಗುತ್ತದೆ – ಯೋಹಾನ 10:26–28; 17:2,3.

ನಿತ್ಯಜೀವದ ವರವು ಯಾರಿಗೂ ಒತ್ತಾಯ ಪೂರ್ವಕವಾಗಿ ಹೇರಲ್ಪಡುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಅದನ್ನು ನಾವು ಬಯಸಬೇಕು ಮತ್ತು ಅದನ್ನು ಹುಡುಕಿ ಕಂಡುಕೊಳ್ಳಬೇಕು, ಅದನ್ನು ಹಿಡಿದುಕೊಳ್ಳಬೇಕು – 1 ತಿಮೋ. 6:12,19.

ನಿಜವಾಗಿ ಹೇಳುವುದಾದರೆ, ದೇವರು ನಮಗೆ ಈಗ ನೀಡಿರುವುದು ನಿರೀಕ್ಷೆಯೆ ಹೊರತು ನಿಜವಾದ ಜೀವವಲ್ಲ. ಅದನ್ನು ನಾವು ಅಂತಿಮವಾಗಿ ಹೊಂದಿಕೊಳ್ಳಬಹುದೆಂಬ ನಿರೀಕ್ಷೆ. ಯಾಕೆಂದರೆ ತನ್ನ ನೀತಿಯನ್ನು ಈಗಿನ ಕಾಲದಲ್ಲಿ ಹೀಗೆ ತೋರಿಸಿ ತಾನು ನೀತಿಸ್ವರೂಪನಾಗಿಯೂ ಯೇಸುವಿನಲ್ಲಿ ನಂಬಿಕೆಯಿಡುವವರನ್ನು ನೀತಿವಂತರೆಂದು ನಿರ್ಣಯಿಸುವವನಾಗಿಯೂ ಕಾಣಿಸಿಕೊಂಡಿದ್ದಾನೆ" – ರೋಮಾ. 3:26.

ದೇವರ ಮಹಾ ಕೃಪೆಯಿಂದ ಕ್ರಿಸ್ತ ಯೇಸುವು ನಮಗಾಗಿ ತನ್ನ ಸ್ವಂತ ಪ್ರಾಣವನ್ನು ಅರ್ಪಿಸುವುದರ ಮೂಲಕ ನಮ್ಮನ್ನು ಕೊಂಡುಕೊಂಡಿದ್ದಾನೆ ಮಾತ್ರವಲ್ಲದೇ ಆತನು ನಮ್ಮ ಮಹಾಯಾಜಕನಾಗಿದ್ದಾನೆ. ಈ ರೀತಿಯಲ್ಲಿ ಆತನು ಈಗ ನಮ್ಮ ನಿರಂತರವಾದ ರಕ್ಷಣೆಯ ಕಾರಣಕರ್ತನಾಗಿದ್ದಾನೆ (ಇಬ್ರಿಯ 5:9). **"ಕ್ರಿಸ್ತನು ನಮಗೆ ಕೊಡುತ್ತೇನೆಂದು ವಾಗ್ದಾನಮಾಡಿದ್ದು ಈ ನಿತ್ಯಜೀವವೇ"** – 1 ಯೋಹಾನ 2:25.

**"ಆ ಸಾಕ್ಷಿ ಯಾವುದೆಂದರೆ ದೇವರು ನಮಗೆ ನಿತ್ಯಜೀವವನ್ನು ಅನುಗ್ರಹಿಸಿದನು.** (ಈಗ ನಂಬಿಕೆ ಮತ್ತು ನಿರೀಕ್ಷೆಯಿಂದ, ನಂತರದಲ್ಲಿ ಆತನು ಪುನಃ ನಿಜವಾಗಿಯೂ ಪ್ರತ್ಯಕ್ಷವಾಗುವಾಗ) **ಆ ಜೀವವು ಆತನ ಮಗನಲ್ಲಿ ಅದೆ. ಯಾವನು ದೇವರ ಮಗನನ್ನು ಅಂಗೀಕರಿಸಿದ್ದಾನೋ ಅವನಿಗೆ ಆ ಜೀವ ಉಂಟು; ಯಾವನು ದೇವರ ಮಗನನ್ನು ಅಂಗೀಕರಿಸಲಿಲ್ಲವೋ ಅವನಿಗೆ ಆ ಜೀವವಿಲ್ಲ"** – 1 ಯೋಹಾನ 5:11,12.

ಈ ನಿತ್ಯಜೀವವನ್ನು ನಮ್ಮ ಸೃಷ್ಟಿಕರ್ತನಿಂದ ನಮ್ಮ ವಿಮೋಚಕನ ಮೂಲಕ ಆದಾಮನಿಗೂ ಆತನ ಸಂತಾನದವರೆಲ್ಲರಿಗೂ ಹೊಂದಿಕೊಳ್ಳುವ ಸಾಧ್ಯತೆಯು, ನಂಬಿಗಸ್ಥರಿಗೆ ಮತ್ತು ವಿಧೇಯರಿಗೆ ಮಾತ್ರವೇ ಉದ್ದೇಶಪೂರಿತವಾಗಿತ್ತು ಮತ್ತು ವಾಗ್ದಾನವಾಗಿತ್ತು. ಪ್ರಸ್ತುತದಲ್ಲಿ ನಿರೀಕ್ಷೆಯಾಗಿಯೇ ಕೊಡಲ್ಪಟ್ಟಿದೆ. ನಂಬಿಗಸ್ಥರಿಗೆ ವಾಸ್ತವವಾಗಿ "ಪುನರುತ್ಥಾನ"ದಲ್ಲಿ ಕೊಡಲ್ಪಡುತ್ತದೆ.

ಈ ಪ್ರಸ್ತಾಪದ ಬಗ್ಗೆ ದೇವರ ಕೂಲಂಕುಶವಾದ ವಾಗ್ದಾನಗಳಲ್ಲಿನ ಮಾತುಗಳು ಲೌಕಿಕ ವೇದಾಂತಗಳ ಮಾತುಗಳಿಗಿಂತ ಭಿನ್ನವಾಗಿರುವುದನ್ನು ಗಮನಿಸ ಬೇಕಾಗುತ್ತದೆ. ಅವರು ಮಾನವರು ಭವಿಷ್ಯದಲ್ಲಿ ನಿತ್ಯಜೀವವನ್ನು ಹೊಂದಿಕೊಳ್ಳಲೇ ಬೇಕು, ಯಾಕೆಂದರೆ ಅವರುಗಳು ಅದನ್ನು ನಿರೀಕ್ಷಿಸುತ್ತಾರೆ ಮತ್ತು ಹೆಚ್ಚಿನ ಪ್ರಕರಣಗಳಲ್ಲಿ ಅದಕ್ಕೆ ಅಂಜಿಕೊಳ್ಳುತ್ತಾರೆ ಎಂಬುದಾಗಿ ಹಕ್ಕಿನಿಂದ ಹೇಳುವವರಾಗಿದ್ದಾರೆ. ಆದರೆ ಯಾವುದೇ ವಿಷಯದಲ್ಲಿನ ನಂಬಿಕೆಗೆ ನಿರೀಕ್ಷೆಯಾಗಲೀ, ಅಂಜಿಕೆಯಾಗಲೀ ಸಮಂಜಸವಾದ ನೆಲೆಯಾಗುವುದಿಲ್ಲ

ಅಥವಾ ಮಾನವರಲ್ಲಿ ಸದಾಕಾಲ ಜೀವದಿಂದಿರುವ ಏನೋ ಒಂದು ಇದೆ ಎಂಬ ಅವರ ಈ ಹಕ್ಕಿನ ಹೇಳಿಕೆಗೆ ಯಾವುದೇ ತಳಹದಿಯಾಗಲೀ ಅಥವಾ ಅಂಥಾಃ ಯಾವುದೇ ಶರೀರ ಭಾಗಗಳು ಇವೆಯೆಂದು ತಿಳಿದು ಬಂದಿರುವುದಿಲ್ಲ ಅಥವಾ ಅವುಗಳ ನೆಲೆಯನ್ನು ಸಾಬೀತುಪಡಿಸುವುದಾಗಲೀ ಅಥವಾ ಪತ್ತೆಹಚ್ಚುವುದಾಗಲೀ ಸಾಧ್ಯವಿಲ್ಲ.

ಆದರೆ ಈ ವಿಷಯದ ಬಗ್ಗೆ ದೇವರ ವಾಕ್ಯದ ದೃಷ್ಟಿಕೋನವು ಅಂಥಾಃ ಯಾವುದೇ ಅಡ್ಡಿಗಳಿಗೆ ಅವಕಾಶಮಾಡಿಕೊಡುವುದಿಲ್ಲ; ಸಂಪೂರ್ಣವಾಗಿ ನಮ್ಮ ಇರುವಿಕೆಯೂ, ಆತ್ಮವೂ "ದೇವರ ಅನುಗ್ರಹ"ವಾಗಿದೆ ಅದು ಪರಾಧೀನಗೊಳಿಸಲಾಗದ ನಮ್ಮ ಸ್ವಂತದ್ದಾಗಿರುವುದಿಲ್ಲ ಎಂಬುದನ್ನು ಅದು ಸಮಂಜಸವಾಗಿ ಪರಿಗಣಿಸುತ್ತದೆ. ಇದಕ್ಕೂ ಹೆಚ್ಚಾಗಿ, ಅದು ಅನ್ಯಜನರ ವೇದಾಂತಗಳು ಒಂದು ದೊಡ್ಡ ಹಾಗೂ ಘೋರವಾದ ಕಷ್ಟವನ್ನು ಮುಕ್ತವಾಗಿ ತಡೆಗಟ್ಟುತ್ತದೆ; ಅನ್ಯ ವೇದಾಂತವು ಮಾನವರು ಎಂದಿಗೂ ನಶಿಸಿಹೋಗುವುದಿಲ್ಲ, ಆತನು ಸದಾ ಜೀವಿಸಲೇಬೇಕಾಗಿದೆ, ಆದುದರಿಂದ ನಿತ್ಯಜೀವವು ಸತ್ಯವೇದವು ಹೇಳುವಂತೆ ದೇವರ ವರದಾನವಲ್ಲ, ಎಲ್ಲರಲ್ಲಿರುವ ಸ್ವಾಭಾವಿಕ ಸ್ವಭಾವವೆಂದು ಅನ್ಯಜನರ ವೇದಾಂತವು ಬಹಳವಾದ ಹಕ್ಕಿನಿಂದ ಹೇಳುತ್ತದೆ. ಅಂಥಾಃ ವೇದಾಂತವು ನಿರಂತರವಾದ ಇರುವಿಕೆಯನ್ನು ಒಳ್ಳೆಯದಾಗಿ ಉಪಯೋಗಿಸುವವರಿಗೆ ಮತ್ತು ಅದು ಯಾರಿಗೆ ಆಶೀರ್ವಾದಕರವಾಗಿದೆಯೋ ಅವರಿಗೆ ಮಾತ್ರವಲ್ಲದೆ ಅದನ್ನು ಒಳ್ಳೆಯ ರೀತಿಯಲ್ಲಿ ಉಪಯೋಗಿಸದವರಿಗೂ ಮತ್ತು ಅದು ಯಾರಿಗೆ ಶಾಪಕರವಾಗಿತ್ತೋ ಅಂಥವರಿಗೂ ಸಹಾ ನೀಡುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ನಾವೀಗಾಗಲೇ ಕಂಡುಕೊಂಡಂತೆ ಸತ್ಯವೇದದ ಬೋಧನೆಗಳು ಈ ಬೆಲೆಕಟ್ಟಲಾಗದ ಅಮೂಲ್ಯವಾದ ಮಹಾ ವರದಾನವು (ಅಂದರೆ ನಿತ್ಯಜೀವವು) ವಿಮೋಚಕ ಹಾಗೂ ಜೀವದಾಯಕನನ್ನು ನಂಬಿ ಅಂಗೀಕರಿಸುವವರಿಗೆ ಮಾತ್ರವೇ ದೊರೆಯುತ್ತದೆ ಎಂದು ಪ್ರಕಟಿಸುತ್ತದೆ. ಇತರರಿಗೆ ಇದು ಹಾನಿಕರವಾಗಿದ್ದು ಅದನ್ನು ಅವರು ಈಗ ಹೊಂದಿಕೊಳ್ಳದಿರುವುದು ಮಾತ್ರವಲ್ಲ ಅವರು ಎಂದಿಗೂ ಅದನ್ನು ಪಡಕೊಳ್ಳಲಾರರು. ಯಾಕೆಂದರೆ, **"ಪಾಪವು ಕೊಡುವ ಸಂಬಳ ಮರಣ; ದೇವರ ಉಚಿತಾರ್ಥ ವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ"** (ರೋಮಾ. 6:23). ದುಷ್ಟರು (ಸತ್ಯದ ತಿಳುವಳಿಕೆಗೆ ಬಂದ ಮೇಲೆಯೂ ಇಚ್ಛಾಪೂರ್ವಕವಾಗಿ ದೇವರಿಗೆ ಅವಿಧೇಯರಾಗಿರುವವರು) ಎರಡನೆಯ ಮರಣದಲ್ಲಿ ದೇವಜನರೊಳಗಿಂದ ತೆಗೆದುಹಾಕಲ್ಪಡುವರು. ಅವರು "ಇಲ್ಲದ ಹಾಗೆ", "ಅವರುಗಳು ಸಂಪೂರ್ಣವಾಗಿ ನಾಶವಾಗುವರು" "ನಿತ್ಯನಿರಂತರವಾದ ನಾಶನವು ಅವರಿಗೆ ಕಡೆಯ ತೀರ್ಪು – ಈ ನಾಶನವು ಸದಾ ಇರುವಂಥಾದ್ದು, ಅದರಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ, ಅವರಿಗೆ ಪುನರುತ್ಥಾನವೆಂಬುದಿಲ್ಲ. ಅವರು ನಿತ್ಯಜೀವವನ್ನೂ ಅದರ ಎಲ್ಲಾ ಸವಲತ್ತುಗಳನ್ನೂ, ಸಂತೋಷವನ್ನೂ ಮತ್ತು ಆಶೀರ್ವಾದಗಳನ್ನು ಸದಾಕಾಲಕ್ಕೂ ಕಳಕೊಳ್ಳುವರು. ಇವರ ಈ ನಷ್ಟಗಳನ್ನು ನಂಬಿಗಸ್ಥರು ಮಾತ್ರವೇ ಪುನಃ ಸಂಪಾದಿಸಿಕೊಳ್ಳುವರು – ಅ.ಕೃ. 3:23. ಕೀರ್ತನೆ 37:9, 20; ಯೋಬ 10:19; 2 ಥೆಸ. 1:9.

ನಿತ್ಯಜೀವವೆಂಬುದು ದೇವಜನರೆಲ್ಲರಿಗೆ ಆತನ ಅಮೂಲ್ಯವಾದ ವರವಾಗಿದೆ ಮತ್ತು ಅದನ್ನು ನಂಬಿಕೆಯೆಂಬ ಕೈಗಳಿಂದ ದೃಢವಾಗಿ ಹಿಡುಕೊಳ್ಳುವುದು ಒಂದು ಸಮತೋಲನವಾದ ಮತ್ತು ಏಕರೂಪದ ಜೀವನಕ್ಕೆ ಬಲು ಅವಶ್ಯವಾಗಿದೆ. ಕ್ರಿಸ್ತನನ್ನು ಅಂಗೀಕರಿಸಿಕೊಂಡು ಆತನ ಸೇವೆಗೆ ತಮ್ಮನ್ನು ಪ್ರತಿಷ್ಠಿಸಿಕೊಳ್ಳುವುದರ ಮೂಲಕ ನಿತ್ಯಜೀವದ ಮೇಲೆ ಹಿಡಿತ ಹೊಂದಿಕೊಳ್ಳುವವರು ಮಾತ್ರವೇ ಯುಕ್ತವಾಗಿ ಮತ್ತು ಲಾಭದಾಯಕವಾಗಿ ಜೀವನದಲ್ಲಿ ಬರುವ ಹಾಗೂ ಈಗ ಉಗ್ರವಾಗಿರುವ ಬಿರುಗಾಳಿಯನ್ನು ಎದುರಿಸಲು ಸಾಧ್ಯ.

## ವಿಶಿಷ್ಟತೆ ಹಾಗೂ ಭಿನ್ನತೆ
## A Distinction and Difference

ಆದರೆ, ಈಗ ನಿರ್ಲಯತ್ವದ ನಿರೀಕ್ಷೆಯನ್ನು ನಿತ್ಯನಿರಂತರವಾದ ಜೀವ ಎಂಬ ಆ ಪದದ ಸಾಧಾರಣ ಅರಿಯುವಿಕೆಯಲ್ಲಿ ಪರೀಕ್ಷೆಮಾಡಿದ ಮೇಲೆ, ಮತ್ತು ನಿತ್ಯನಿರಂತರವಾದ ಜೀವವು ಸೂಕ್ತ ಸಮಯದಲ್ಲಿ ಅದನ್ನು ಹೊಸಒಡಂಬಡಿಕೆಯ ಷರತ್ತಿಗನುಸಾರವಾಗಿ ಅಂಗೀಕರಿಸುವ ಆದಾಮನ ಸಂತಾನದವರೆಲ್ಲರಿಗೂ ದೇವರ ಮುನ್ನೇರ್ಪಾಟಾಗಿದೆ ಎಂದು ಕಂಡುಕೊಂಡ ಮೇಲೆ, ನಾವು ಮತ್ತೊಂದು ಹೆಜ್ಜೆ ಮುಂದೆ ಹೋಗುವವರಾಗಿದ್ದು ನಿತ್ಯಜೀವ ಮತ್ತು ನಿರ್ಲಯತ್ವ ಇವೆರಡೂ ಜನಸಾಮಾನ್ಯರು ಊಹಿಸುವಂತೆ ಸಮಾನಾರ್ಥಕ ಪದಗಳಲ್ಲ ಎಂಬುದನ್ನು ಗಮನಿಸುತ್ತೇವೆ. 'ನಿರ್ಲಯತ್ವ' ಎಂಬ ಪದವು ನಿತ್ಯ ನಿರಂತರವಾಗಿ ಜೀವಿಸುವ ಶಕ್ತಿಗಿಂತಲೂ ಮಿಗಿಲಾದುದು ಮತ್ತು ದೇವರ ವಾಕ್ಯಕ್ಕನುಸಾರವಾಗಿ ಮಿಲಿಯಾಂತರ ಜನರು ಅಂತಿಮವಾಗಿ ನಿತ್ಯಜೀವವನ್ನು ಅನುಭವಿಸಬಹುದು. ಆದರೆ ಅತ್ಯಂತ ಸೀಮಿತವಾದ 'ಚಿಕ್ಕ ಹಿಂಡಿನವರು' ಮಾತ್ರವೇ ನಿರ್ಲಯರಾಗಿ ಮಾಡಲ್ಪಡುವರು.

ನಿರ್ಲಯತ್ವವು ದೈವಸ್ವರೂಪದ ಒಂದು ಅಂಶ ಅಥವಾ ಗುಣಧರ್ಮವಾಗಿದೆ ಆದರೆ ದೈವೀಕವಲ್ಲದ

ಮಾನವರ ಅಥವಾ ದೇವದೂತರ ಅಥವಾ ಬೇರೆ ಯಾರದ್ದಾದರೂ ನಿರ್ಲಯತ್ವ ಆಗಲಾರದು. ಯಾಕೆಂದರೆ ಇದರಲ್ಲಿ 'ಕ್ರಿಸ್ತನು' ಮತ್ತು ಆತನ ಮದಲಗಿತ್ತಿಯೂ ಸಭೆಯೂ ಆದ ಆತನ 'ಚಿಕ್ಕ ಹಿಂಡಿನವರು' ಮಾತ್ರ ದೈವೀಕ ಸ್ವಭಾವದಲ್ಲಿ ಪಾಲುದಾರರಾಗಿದ್ದಾರೆ. ಅವರುಗಳು ಮೇಲೆ ಪರಲೋಕದಲ್ಲಿಯಾಗಲೀ, ಕೆಳಗೆ ಭೂಮಿಯ ಮೇಲಾಗಲೀ ಬೇರೆಲ್ಲಾ ಜೀವಿಗಳಿಗಿಂತ ವಿಶೇಷ ವಿನಾಯಿತಿ ಹೊಂದಿದ್ದಾರೆ – 2 ಪೇತ್ರ 1:4.

## ಮಾನವನ ಆತ್ಮವು ಅಮರತ್ವವುಳ್ಳದ್ದೋ? ಅಥವಾ ಅದಕ್ಕೆ ಅಮರತ್ವಹೊಂದಿಕೊಳ್ಳುವ ನಿರೀಕ್ಷೆ ಉಂಟೋ ?

## Is the human Soul Immortal, or has it a hope of becoming Immortal

ಮಾನವನ ಆತ್ಮ (ಚೇತನಾಯುಕ್ತ ಜೀವವು) ಜೀವಶ್ವಾಸವು (rauch–pneuma) ಮಾನವ ಶರೀರದೊಂದಿಗೆ ಮಿಲನಗೊಂಡುದರ ಪರಿಣಾಮವಾಗಿ ಉಂಟಾಯಿತೆಂಬುದನ್ನು ನಾವು ನೋಡಿದ್ದೇವೆ; ಇದು ಕೆಳವರ್ಗದ ಪ್ರಾಣಿಗಳ (ಚೇತನಾಯುಕ್ತ ಪ್ರಾಣಿಗಳು) ಆತ್ಮಗಳಂತೆಯೇ ಆಯಿತು. ಆದರೆ ಮಾನವನಿಗೆ ಉತ್ತಮವಾದ ಶರೀರರಚನೆಯ ಯುಕ್ತಸಂಪನ್ನತೆ ಪಡೆಯಿತು. ಅಂದರೆ ಆತನು ಶ್ರೇಷ್ಠವಾದ ಶಕ್ತಿಗಳುಳ್ಳ ಮತ್ತು ಗುಣಲಕ್ಷಣಗಳುಳ್ಳ ಶರೀರರಚನೆಯನ್ನು ಪಡಕೊಂಡನು. ನಮ್ಮ ಪ್ರಸ್ತುತ ವಿಚಾರಣೆಯೆಂದರೆ, ಎಲ್ಲಾ ಪ್ರಾಣಿಗಳೂ ನಿರ್ಲಯತ್ವ ಅಥವಾ ಅಮರತ್ವವುಳ್ಳವುಗಳೋ? ನಾವು ಇದಕ್ಕೆ ನಕರಾತ್ಮಕವಾಗಿ ಉತ್ತರಿಸಿದರೆ, ಮಾನವನಿಗೆ ಅಮರತ್ವದ ನಿರೀಕ್ಷೆಯನ್ನುಂಟುಮಾಡುವಂತೆ ಬೇರೆ ಪ್ರಾಣಿಗಳಿಗಿಂತ ಹೆಚ್ಚಾದುದ್ದನ್ನು ಆತನು ಏನು ಹೊಂದಿಕೊಂಡಿದ್ದಾನೆ? ಎಂದು ವಿಚಾರಿಸಬೇಕಾಗುತ್ತದೆ.

ಸೊಲೊಮೋನನು ಹೇಳಿರುವಂತೆ ಮತ್ತು ನಮ್ಮ ಸ್ವಂತ ಅವಲೋಕನದಂತೆ ಮಾನವನು ಸಹಾ ಬೇರೆ ಪ್ರಾಣಿಗಳಂತೆ ಮರಣಕ್ಕೆ ತುತ್ತಾಗುವವನಾಗಿದ್ದಾನೆ – **"ಮನುಷ್ಯನ ಗತಿಯೂ, ಪಶುವಿನ ಗತಿಯೂ ಒಂದೇ; ಪಶುವಿಗೆ ಸಾವು ಬರುವ ಹಾಗೆ ಮನುಷ್ಯನಿಗೂ ಬರುವುದು; ಎಲ್ಲಕ್ಕೂ ಪ್ರಾಣ ಒಂದೇ; ಮನುಷ್ಯನು ಪಶುವಿಗಿಂತ ಶ್ರೇಷ್ಠನಲ್ಲ"** (ಪ್ರಸಂಗಿ 3:19). ಪ್ರತಿಯೊಬ್ಬರ ಬಳಿಯೂ ಇರುವ ದುಃಖ ಸೂಚಕವಾದ ಕಪ್ಪು ವಸ್ತ್ರ (ಕ್ರೇಪ್), ಸುಗಂಧದ್ರವ್ಯದ ಭರಣಿ (ಕಾಸ್ಕೆಟ್), ಶವದ ವಾಹನ (ಹರ್ಸ್), ಸಮಾಧಿ (ಸಿಮೆಟ್ರಿ) ಇವುಗಳು ಮಾನವನು ಸಾಯುತ್ತಾನೆ, ಆತನು ನಿರ್ಲಯನಲ್ಲ ಎಂಬುದಕ್ಕೆ ಸಾಕ್ಷಿಯಾಗಿವೆ. ಯಾಕೆಂದರೆ ಅಮರತ್ವ ಎಂಬ ಪದವು ಮರಣವಿಲ್ಲದ್ದು, ಸಾಯದಿರುವುದು ಎಂಬುದನ್ನು ಸೂಚಿಸುತ್ತದೆ. ನಿರ್ಲಯತ್ವದ ಬಗ್ಗೆ ಮಾನವನ ನಿರೀಕ್ಷೆಗಳು ಏನೇ ಇರಲಿ, ಅದು ಪ್ರಸ್ತುತದಲ್ಲಿ ಪಡಕೊಳ್ಳುವುದಲ್ಲ, ಹೆಚ್ಚೆಂದರೆ ಮುಂದಿನ ಕೆಲವು ದೈವಿಕ ಕೊಡುಗೆಗಳಲ್ಲಿ ಇದು ಸಹಾ ಒಂದಾಗಿದ್ದಿರಬಹುದು.

ಈ ಪ್ರಶ್ನೆಯ ಬಗ್ಗೆ ಹೆಚ್ಚಿನ ವಿಚಾರಣೆ ಮಾಡುವ ಮೊದಲು ನಾವು 'ಮರ್ತ್ಯ' ಮತ್ತು 'ಅಮರ್ತ್ಯ' ಎಂಬ ಪದಗಳ ಅರ್ಥವನ್ನು ಪರಿಗಣಿಸುವುದು ಲಾಭಕರವಾಗಿದೆ. ಯಾಕೆಂದರೆ, ಈ ಪದಗಳ ಮಹತ್ವಗಳನ್ನು ದಟ್ಟವಾಗಿ ತಪ್ಪು ಅರ್ಥಮಾಡಿಕೊಂಡಿರುವುದೇ ಬಹಳವಾಗಿ ಪ್ರಚಲಿತದಲ್ಲಿದೆ ಮತ್ತು ಇದು ಕೆಲವೊಮ್ಮೆ ಆಲೋಚನೆಗಳ ಗೊಂದಲಕ್ಕೆ ಎಡೆಮಾಡಿಕೊಡುವುದಾಗಿದೆ.

'ಅಮರತ್ವ' ಎಂಬ ಪದವು ಮರಣವಿಲ್ಲದ್ದು ಅಥವಾ ಮರಣ ಪ್ರವೇಶಮಾಡಲಾಗದ್ದು, ಕಲುಷಿತಗೊಳ್ಳದ ಅಳಿದು ಹೋಗದೇ, ನಾಶವಾಗದೇ, ಇರುವಂಥಾದ್ದು ಎಂಬುದನ್ನು ಸೂಚಿಸುತ್ತದೆ. ಯಾವೊಬ್ಬನ ಅಸ್ಥಿತ್ವವು ಮತ್ತೊಬ್ಬರ ಮೇಲೆ ಅಥವಾ ಅಹಾರ, ಬೆಳಕು, ಗಾಳಿ ಮುಂತಾದ ಸ್ಥಿತಿಗತಿಗಳ ಮೇಲೆ ಯಾವುದಾದರೂಂದು ರೀತಿಯಲ್ಲಿ ಅವಲಂಬಿತವಾಗಿರುವದಾದರೆ ಅದು ನಿರ್ಲಯತ್ವ ಅಥವಾ ಅಮರತ್ವ ವೆನಿಸಿಕೊಳ್ಳುವುದಿಲ್ಲ. **"ತಂದೆಯು ಸ್ವತಃ ಜೀವವುಳ್ಳವನಾಗಿದ್ದಾನೆ"** (ಯೋಹಾನ 5:26) ಎಂದು ಬರೆದಿರುವ ಪ್ರಕಾರ ಈ ಸ್ವಭಾವವು ಮೂಲದಲ್ಲಿ ಯೆಹೋವ ದೇವರಲ್ಲಿ ಮಾತ್ರವೇ ಅಂತರ್ಜಾತವಾಗಿತ್ತು. ಆದರೆ ಆತನ ಇರುವಿಕೆಯು ಎಲ್ಲಿಂದಲೂ ಉತ್ಪತ್ತಿಯಾದುದಲ್ಲ, ಅಥವಾ ಸಂರಕ್ಷಿಸಲ್ಪಟ್ಟದ್ದಲ್ಲ ಆತನು **"ಸರ್ವಯುಗಗಳ ಅರಸನೂ, ನಿರ್ಲಯನೂ, ಅದೃಶ್ಯನೂ ಆದ ಏಕ ದೇವರು"** (1 ತಿಮೋ. 1:17). ಈ ವಿಷಯದಲ್ಲಿ ಇಂಥಾಃ ದೇವರ ವಾಕ್ಯಗಳೇ ಅಧಿಕಾರಯುಕ್ತವಾಗಿ ನಿರ್ಣಾಯಕವಾಗಿವೆ. ಪ್ರಾಯಶಃಕ್ಕೂ ಮಿಗಿಲಾಗಿ ಮಾನವರು, ದೇವದೂತರುಗಳು, ಪ್ರಧಾನ ದೇವದೂತರುಗಳು ಮತ್ತು ದೇವಕುಮಾರನೂ ಸಹಾ ಮಾಂಸಧಾರಿಯಾಗಿ, ನಮ್ಮ ಮಧ್ಯದಲ್ಲಿ ವಾಸಮಾಡಿದ ಕಾಲದಲ್ಲಿಯೂ, ಅದಕ್ಕೆ ಮುಂಚೆಯೂ ಅಮರ್ತ್ಯರಲ್ಲ, ಎಲ್ಲರೂ ಮರ್ತ್ಯರೇ ಎಂಬುದನ್ನು ನಾವೆಲ್ಲರೂ ತಿಳಿದಿರಬೇಕು.

ಆದರೆ 'ಮರ್ತ್ಯ' ಎಂಬ ಪದವು ಕೇವಲ ಮರಣಹೊಂದುವುದು ಎಂಬುದನ್ನು ಸೂಚಿಸದೆ, ಮರಣ ಹೊಂದಬಹುದು ಎಂಬುದನ್ನು ಮಾತ್ರವೇ ಸೂಚಿಸುತ್ತದೆ. – ಜೀವವನ್ನು ಹೊಂದಿರುವುದು ಅದನ್ನು ಮುಂದುವರಿಕೊಂಡು ಹೋಗುವ ದೇವರ ಮೇಲೆ ಅದು ಅವಲಂಬಿತವಾಗಿದೆ. ಉದಾಹರಣೆಗೆ ದೇವದೂತರುಗಳು ಸಹಾ ಅಮರ್ತ್ಯರಲ್ಲ. ಅವರೂ ಸಾಯಬಹುದಾಗಿದೆ. ಅವರು ದೇವರ ಜ್ಞಾನಕ್ಕೆ ವಿರೋಧವಾಗಿ, ಆತನ

ಪ್ರೀತಿಯುಳ್ಳ ಆಡಳಿತಕ್ಕೆ ವಿರೋಧವಾಗಿ ದಂಗೆ ಏಳುವಾಗ ಅವರನ್ನೂ ದೇವರು ನಾಶಪಡಿಸುತ್ತಾನೆ. ಆತನಲ್ಲಿ (ಆತನ ಅನುಗ್ರಹದಲ್ಲಿ) ಅವರು ಜೀವಿಸುತ್ತಾರೆ, ಚಲಿಸುತ್ತಾರೆ ಮತ್ತು ಅವರ ಅಸ್ತಿತ್ವವಿದೆ. ನಿಜವಾಗಿಯೂ ಬೆಳಕಿನ ದೂತನಾಗಿದ್ದ ಸೈತಾನನು, ದೇವರಿಗೆ ವಿರುದ್ಧವಾಗಿ ದಂಗೆ ಎದ್ದ ಕಾರಣ ಸೂಕ್ತ ಸಮಯದಲ್ಲಿ ಆತನೂ ನಾಶಗೊಳ್ಳುವನು ಎಂದು ಬರೆದದೆ (ಇಬ್ರಿಯ 2:14 ನೋಡಿರಿ). ಇದು ಸೈತಾನನು ಮರ್ತ್ಯನು ಎಂಬುದನ್ನು ಸಾಬೀತುಗೊಳಿಸುವುದು ಮಾತ್ರವಲ್ಲ, ಇದು ದೇವದೂತರ ಸ್ವಭಾವವು ಮರ್ತ್ಯ ರೂಪದ್ದಾಗಿದೆ ಎಂಬುದನ್ನು ಸಹಾ ಸಾಬೀತುಪಡಿಸುತ್ತದೆ – ತನ್ನ ಸೃಷ್ಟಿಕರ್ತನಿಂದಲೇ ನಾಶನಕ್ಕೆ ಒಳಗಾಗುವನು. ಮಾನವರಾದರೋ ದೇವದೂತರುಗಳಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾಡಲ್ಪಟ್ಟಿದ್ದಾರೆ (ಕೀರ್ತನೆ 8:5) ಎಂದು ಬರೆಯಲ್ಪಟ್ಟಿದೆ ಮತ್ತು ಇದರ ಪರಿಣಾಮವಾಗಿ ಅವರುಗಳು ಸಹಾ ಮರ್ತ್ಯರಾಗಿದ್ದಾರೆ. ನಮ್ಮ ಜನಾಂಗದವರು ಕಳೆದ ಆರು ಸಹಸ್ರವರ್ಷಗಳಿಂದ ಸಾಯುತ್ತಲೇ ಇದ್ದಾರೆ ಎಂಬುದೇ ಇದಕ್ಕೆ ಸಾಕ್ಷಿಯಾಗಿದೆ. ಕ್ರಿಸ್ತನಲ್ಲಿರುವ ಭಕ್ತರುಗಳು ಸಹಾ ನಿರ್ಲಯತ್ವವನ್ನು ಬಯಸುವಂತೆ ಬೋಧಿಸಲಾಗಿದೆ ರೋಮಾ. 2:7.

ಮರ್ತ್ಯ ಎಂಬುದರ ಸಾಮಾನ್ಯ ನಿರೂಪಣೆಯೆಂದರೆ 'ಸಾಯುವುದು' ಮತ್ತು 'ಅಮರ್ತ್ಯ'ವೆಂದರೆ ನಿತ್ಯವಾಗಿರುವುದು – ಇವೆರಡೂ ತಪ್ಪಾಗಿವೆ. ಈ ಸಾಮಾನ್ಯ ಅರ್ಥವಿವರಣೆಯು ತಪ್ಪೆಂದು ನಿರೂಪಿಸಲು ನಾವು ಒಂದು ಸರಳವಾದ ಪ್ರಶ್ನೆಯನ್ನು ಪರ್ಯಾಲೋಚನೆಗಾಗಿ ಮುಂದಿಟ್ಟುಕೊಳ್ಳೋಣ :

## ಆದಾಮನು ಸೃಷ್ಟಿಸಲ್ಪಟ್ಟಿದ್ದು ಮರ್ತ್ಯನಾಗಿಯೋ ಅಥವಾ ಅಮರ್ತ್ಯನಾಗಿಯೋ

## Was Adam created Mortal or Immortal ?

ಇದಕ್ಕೆ ಉತ್ತರವು 'ಆದಾಮನು ಅಮರ್ತ್ಯನಾಗಿ ಉಂಟುಮಾಡಲ್ಪಟ್ಟನು' ಎಂದಾದರೆ, ಹೇಗೆ ಆತನಿಗೆ 'ಸತ್ತೇ ಹೋಗುವಿ' ಎಂಬ ಬೆದರಿಕೆ ಹಾಕಲಾಯಿತು? ಮತ್ತು ನಂತರದಲ್ಲಿ ಆತನಿಗೆ ಮರಣದ ಶಾಪವನ್ನು ಯಾಕೆ ನೀಡಲಾಯಿತು? ಆತನು ಮರಣವಿಲ್ಲದವನಾದರೆ ಆತನು ಮರಣ ಹೊಂದುವುದಾದರೂ ಹೇಗೆ? ಮತ್ತು ದೇವರು ಆತನನ್ನು ಏದೇನ್ ತೋಟದಿಂದ, ಜೀವದಾಯಕ ವೃಕ್ಷದಿಂದ ದೂರ ಸ್ಥಳಕ್ಕೆ ಹೊರಡಿಸಿಬಿಟ್ಟದ್ದು ಯಾಕೆ? ಇಲ್ಲವಾದರೆ ಆತನು ಆ ಜೀವದಾಯಕ ಮರಣ ಹಣ್ಣನ್ನು ತಿಂದು ಶಾಶ್ವತವಾಗಿ ಜೀವಿಸಬಹುದಾಗಿತ್ತಲ್ಲವೇ? ಎಂದು ನಾವು ಪ್ರತಿಕ್ರಿಯಿಸುತ್ತೇವೆ – 1 ಆದಿಕಾಂಡ 3:2.6.

ಒಂದುವೇಳೆ ಉತ್ತರವು 'ಆದಾಮನು ಮರ್ತ್ಯನಾಗಿಯೇ ಸೃಷ್ಟಿಸಲ್ಪಟ್ಟನು' ಎಂದಾದರೆ (ಸಾಧಾರಣವಾಗಿ 'ಸಾಯುವುದು' ಎಂಬ ಅರ್ಥವಿವರಣೆಯ ಪ್ರಕಾರ), ನಾವು ವಿಚಾರಿಸುವುದೇ ನೆಂದರೆ, ಈಗಾಗಲೇ ಆತನು ಸಾಯುವ ಸ್ಥಿತಿಯನ್ನು ಹೊಂದಿದ್ದರೂ, ಅದರಿಂದ ಎಂದೂ ಬದಲಾಗದಿದ್ದರೂ ದೇವರು ಆತನು ಅವಿಧೇಯನಾದ ಮೇಲೆ 'ಮರಣದ ಶಿಕ್ಷೆಯನ್ನು' ಆತನಿಗೆ ಕೊಡುವುದಾದರೂ ಹೇಗೆ? ಆದಾಮನು ಸಾಯುವವನಾಗಿಯೇ ಸೃಷ್ಟಿಸಲ್ಪಟ್ಟಿದ್ದರೆ ದೇವರು ಆತನು 'ಪಾಪದ ಮೂಲಕ ಮರಣ ಹೊಂದುವವನಾದನು' ಎಂದು ಹೇಳುವುದಾದರೂ ಹೇಗೆ ?

'ಮರ್ತ್ಯ' ಮತ್ತು 'ಅಮರ್ತ್ಯ' ಇವುಗಳ ಸರಿಯಾದ ಈ ಕೆಳಗಣ ಅರ್ಥವಿವರಣೆಯನ್ನು ಸ್ಪಷ್ಟವಾಗಿ ಗ್ರಹಿಸಿಕೊಳ್ಳದ ಹೊರತು ಇಂಥಾಃ ಗೊಂದಲಗಳನ್ನು ನಾವು ತಡೆಗಟ್ಟಲಾರೆವು :

**ಅಮರ್ತ್ಯ:** ಸಾವಿಲ್ಲದಿರುವಿಕೆ. ಸಾವೆಂಬುದು ಅಸಾಧ್ಯವಾದ ಒಂದು ಪರಿಸ್ಥಿತಿ.

**ಮರ್ತ್ಯ:** ಮರಣವು ಸಾಧ್ಯವಾಗುವ ಒಂದು ಪರಿಸ್ಥಿತಿ – ಮರಣಕ್ಕೆ ಬದ್ಧವಾದ ಸ್ಥಿತಿ, ಆದರೆ 'ಮರಣಶಿಕ್ಷೆಗೆ ಗುರಿಯಾಗದ ಹೊರತು' ಅದು ಸಾಯುವ ಸ್ಥಿತಿಯಾಗಬೇಕೆಂದಿಲ್ಲ.

ಈ ದೃಷ್ಟಿಕೋನದಿಂದ ನಾವು ಕಣ್ಣು ಹಾಯಿಸಿದರೆ ಆದಾಮನು ಮರ್ತ್ಯನಾಗಿಯೇ ಸೃಷ್ಟಿಸಲ್ಪಟ್ಟನು – ಮರಣದ ಸ್ಥಿತಿಯ ಅಥವಾ ನಿತ್ಯನಿರಂತರವಾದ ಜೀವನ ಸ್ಥಿತಿಯ ಸಾಧ್ಯತೆ ಇತ್ತು. ಆತನು ತನ್ನ ಜ್ಞಾನಿಯೂ, ನ್ಯಾಯವಂತನೂ ಮತ್ತು ಪ್ರೀತಿಯುಳ್ಳವನೂ ಆದ ಸೃಷ್ಟಿಕರ್ತನನ್ನು ಅಸಂತುಷ್ಟಿ ಅಥವಾ ಸಂತುಷ್ಟಿ ಪಡಿಸುವುದರ ಮೇಲೆ ಆತುಕೊಂಡು ಇಲ್ಲಿಯವರೆಗೂ ಜೀವಿಸುವ ಮತ್ತು ನಿರಂತರ ಜೀವಿಸುವ ಒಂದು ಸಾಧ್ಯತೆಯಾಗಿತ್ತು ಎಂದು ಕಂಡುಕೊಳ್ಳುತ್ತೇವೆ. ಆತನು ವಿಧೇಯನಾಗಿ ಉಳಿದಿದ್ದರೆ, ಇಲ್ಲಿಯವರೆಗೂ ಮತ್ತು ಸದಾಕಾಲಕ್ಕೂ ಬದುಕಿರುತ್ತಿದ್ದನು. ಆದರೂ ಅವಿಧೇಯನಾದಾಗ ಯಾವ ಸಮಯದಲ್ಲಿಯಾದರೂ ಆತನು ಮರಣಕ್ಕೆ ತುತ್ತಾಗಬೇಕಾಗಿತ್ತು. ಅಂಥಾಃ ಒಂದು ಸ್ಥಿತಿಯು ಅನಿಶ್ಚಿತವಾಗುತ್ತಿರಲಿಲ್ಲ; ಯಾಕೆಂದರೆ ಆತನೊಂದಿಗೆ ಇರುವ ದೇವರು ಎಂದೂ ಬದಲಾಗುವವನಲ್ಲ; ಈ ರೀತಿಯಲ್ಲಿ ಆದಾಮನು ತನ್ನ ಸೃಷ್ಟಿಕರ್ತನಿಗೆ ನಿಷ್ಠೆಯುಳ್ಳವನೂ ವಿಧೇಯನೂ ಆಗಿರುವವರೆಗೂ ನಿತ್ಯನಿರಂತರವಾದ ಜೀವಿತದ ಪೂರ್ಣ ಭರವಸೆ ಇತ್ತು. ಇದಕ್ಕಿಂತ ಹೆಚ್ಚಾದುದನ್ನು ನ್ಯಾಯಯುಕ್ತವಾಗಿ ಯಾರೂ ಕೇಳುವ ಹಾಗಿಲ್ಲ.

ಆದಾಮನು ಅವಿಧೇಯನಾಗುವ ಮುನ್ನ ಆತನ ಜೀವನ ಸ್ಥಿತಿಯು ಈಗ ದೇವದೂತರುಗಳು ಅನುಭವಿಸುತ್ತಿರುವಂತೆಯೇ ಇತ್ತು; ಆತನು ಪೂರ್ಣಪ್ರಮಾಣದ ಜೀವವನ್ನು, ಅಂದರೆ ಮುಂದುವರೆಯುವ ಜೀವಿತವನ್ನು ಹೊಂದಿದ್ದನು. ಇದನ್ನು ಆತನು ದೇವರಿಗೆ ವಿಧೇಯನಾಗಿರುವುದರ ಮೂಲಕ ಸದಾಕಾಲಕ್ಕೂ ಉಳಿಸಿಕೊಳ್ಳಬಹುದಿತ್ತು. ಆದರೆ ಆತನು ಮರಣವಿಲ್ಲದವನಾಗಿ ಇರದ ಕಾರಣ, ಜೀವವೆಂಬುದು ಆತನ ಕೈಯಲ್ಲಿಯೇ ಇರದೆ ಆತನು ಇದಕ್ಕಾಗಿ ತನ್ನ ಸೃಷ್ಟಿಕರ್ತನ ಮರ್ಜಿಯ ಮೇಲೆ ಆತುಕೊಳ್ಳ ಬೇಕಾದುದರಿಂದ, ದೇವರು ಆತನಿಗೆ ನೀನು ನನಗೆ ಅವಿಧೇಯನಾದಲ್ಲಿ ಸಾಯಬೇಕಾಗುವುದು ಎಂಬ ಬೆದರಿಕೆಯನ್ನೊಡ್ಡಿದ್ದರಲ್ಲಿ ಅರ್ಥವಿದೆ. ಅದು ಜೀವನ ಕಿರಣವು, ಜೀವಶ್ವಾಸವು ನಷ್ಟಗೊಳ್ಳುವುದರ ಅರ್ಥಹೊಂದಿದೆ. ಜೀವವಿಲ್ಲದ ದೇಹವು ಕೊಳೆತು ಮಣ್ಣಾಗುವುದು ಮತ್ತು ಜೀವವುಳ್ಳ ಆತ್ಮವು ಅಥವಾ ಚೇತನಾಯುಕ್ತವಾದುದು ಇಲ್ಲವಾಗುವುದು. ಆದಾಮನು ಅಮರ್ತ್ಯನಾಗುತ್ತಿದ್ದರೆ ಅಥವಾ ಮರಣವಿಲ್ಲದವ ನಾಗಿರುತ್ತಿದ್ದರೆ, ಸಾವಿಲ್ಲದವನಾಗಿದ್ದರೆ ದೇವರ ಮಾತುಗಳು ಕೇವಲ ಬೆದರಿಕೆ ಮಾತ್ರವೇ ಆಗಿರುತ್ತಿತ್ತು. ಆದರೆ ಆದಾಮನು ಮರ್ತ್ಯನಾದ ಕಾರಣ, ಸಾಯಬಲ್ಲವನಾದ ಕಾರಣ, ದೇವರು ಆತನನ್ನು ಕಾಪಾಡದ ಹೊರತು ಮರಣಕ್ಕೆ ತುತ್ತಾಗಬೇಕಾಗಿರುವನು. ಪ್ರಕಟವಾಗಿರುವಂತೆ ಆತನು ತಾನು ಅವಿಧೇಯನಾದ ದಿನವೇ ಮರಣಕ್ಕೆ ಅಧೀನನಾದನು – 2 ಪೇತ್ರ 3:8.

ಸತ್ಯವೇದದಲ್ಲಿ ಅಮರವಾದ ಆತ್ಮ, ಸಾವಿಲ್ಲದ ಆತ್ಮ, ಎಂದಿಗೂ ಮರಣಿಸದ ಆತ್ಮ ಮುಂತಾದ ಪದಗಳು ಬಹಳಷ್ಟಿವೆ ಎಂದು ಆಲೋಚಿಸುವವರಿಗೆ ನಾವು ಸತ್ಯವೇದದ ಹೊಂದಾಣಿಕೆ (ಬೈಬಲ್ ಕಾನ್‌ಕಾರ್ಡೆನ್ಸ್) ಪುಸ್ತಕವನ್ನು ತೆಗೆದುಕೊಂಡು ಈ ಪದಗಳಿಗಾಗಿಯೂ ಅದೇ ಅರ್ಥ ಸೂಚಿಸುವ ಇತರ ಪದಗಳಿಗಾಗಿಯೂ ಹುಡುಕಿರಿ ಎನ್ನುವುದಕ್ಕಿಂತ ಹೆಚ್ಚಿನ ಬುದ್ಧಿಮಾತುಗಳನ್ನು ಹೇಳುವುದಿಲ್ಲ. ಅವರಿಗೆ ಇಂಥಾಃ ಯಾವುದೇ ಪದಗಳು ದೊರೆಯುವುದಿಲ್ಲ; ಆದುದರಿಂದ ಪ್ರಾಮಾಣಿಕ ಸತ್ಯ ಅನ್ವೇಷಣೆಗಾರರು ತ್ವರಿತವಾಗಿ ಶತಮಾನಗಳಿಂದ ದೇವರ ವಾಕ್ಯಕ್ಕೆ ಕ್ರೈಸ್ತರಾದವರು ತಮ್ಮ ಆಲೋಚನೆಯಲ್ಲಿ ಏನನ್ನಾದರೂ ಸೇರಿಸುತ್ತಲೇ ಇದ್ದಾರೆ ಎಂಬುದನ್ನು ಕಂಡುಕೊಳ್ಳುತ್ತಾರೆ. ಇದು ಅವರಿಗೇ ಹೆಚ್ಚಿನ ಗೊಂದಲವನ್ನುಂಟು ಮಾಡುವುದಾಗಿದೆ.

ದೇವರ ವಾಕ್ಯದ ಪ್ರಕಾರವಾಗಿ ದೇವದೂತರುಗಳು ನಿತ್ಯಜೀವಿತವನ್ನು ಅನುಭವಿಸುತ್ತಿರುವರಾದರೂ ಅವರುಗಳು ಕೂಡ ಮರ್ತ್ಯರೇ ಸರಿ. ಇದರ ಅರ್ಥ ಅವರ ನಿತ್ಯಜೀವದ ಸ್ಥಿತಿಯು ಅವರುಗಳು ಅಮರ್ತ್ಯರು ಅಥವಾ ಸಾವಿಲ್ಲದವರು, ಹೀಗಾಗಿ ಅವರನ್ನು ಅವರ ಸೃಷ್ಟಿಕರ್ತನು ನಾಶಗೊಳಿಸಲಾರರು ಎಂಬ ಕಾರಣದಿಂದ ಅಲ್ಲ; ಆದರೆ ಆತನು ಅವರುಗಳು ತನ್ನ ನ್ಯಾಯದ ಮತ್ತು ಪ್ರೀತಿಯ ವ್ಯವಸ್ಥೆಗೆ ತಕ್ಕಂತೆ ಇರುವಷ್ಟು ದಿವಸ ಜೀವಿಸಲಿ ಎಂದು ಬಯಸಿರುವುದರಿಂದಲೇ. ಇದು ಬಹಳ ಸರಳವಾದ ನಿರೂಪಣೆ; ಸೈತಾನನು ಸಹಾ ಪಾಪಮಾಡುವ ಮುನ್ನ ಒಬ್ಬ ಪವಿತ್ರ ಪ್ರಧಾನದೂತನೇ ಆಗಿರಲಿಲ್ಲವೇ? ನಂತರದಲ್ಲಿ ತನ್ನ ಹೆಮ್ಮೆಯ ಕಾರಣ ಆತನು ಇಚ್ಛಾಪೂರ್ವಕವಾಗಿ, ಉದ್ದೇಶಪೂರ್ವಕವಾಗಿ ದೇವರನ್ನು ವಿರೋಧಿಸಿದ ಕಾರಣ ಆತನ ವಿಷಯದಲ್ಲಿ **"ಕರ್ತನು. . . . ಎಲ್ಲಾ ದುಷ್ಟರನ್ನು ಸಂಹರಿಸುತ್ತಾನೆ"** (ಕೀರ್ತನೆ 145:20), **"ಅಂಥವರು ಕರ್ತನ ಸಮ್ಮುಖಕ್ಕೂ ಆತನ ಪರಾಕ್ರಮದ ವೈಭವಕ್ಕೂ ದೂರವಾಗಿ ನಿತ್ಯನಾಶನವೆಂಬ ದಂಡನೆಯನ್ನು ಅನುಭವಿಸುವರು"** (2 ಥೆಸ 1:9) ಎಂದು ಬರೆದದೆ. ಸೈತಾನನ ನಾಶನದ ಬಗ್ಗೆ ಇರುವ ವಿಶದವಾದ ಪ್ರಕಟನೆಯನ್ನು ಗಮನಿಸಿ. ಇದು ತಾತ್ವಿಕವಾಗಿ ಆತನ (ಸೈತಾನನ) ದುರ್ಮಾರ್ಗವನ್ನು ಅನುಸರಿಸುವವರೆಲ್ಲರಿಗೂ, ದೇವರ ವ್ಯವಸ್ಥೆಯನ್ನು ತಿಳಿದೂ, ತಿಳಿದೂ ಅದನ್ನು ಉದ್ದೇಶಪೂರ್ವಕವಾಗಿ ತಿರಸ್ಕರಿಸುವವರೆಲ್ಲರಿಗೂ ಅನ್ವಯವಾಗುತ್ತದೆ – ಇಬ್ರಿಯ 2:14.

ದೇವರ ವಾಕ್ಯವು ಮಾನವರ ಮರ್ತ್ಯತೆಯ ಬಗ್ಗೆ ಮಾತನಾಡುವಾಗ ಮತ್ತು ವಾಸ್ತವವಾಗಿ ಎಲ್ಲಾ ವಿವರಗಳೂ ದೇವರೊಂದಿಗಿನ ಮಾನವರ ಸಂಬಂಧಕ್ಕೆ ಮಿತಿಯಾಗಿದೆ ಎಂದು ಹೇಳುವುದಾದರೂ ಮತ್ತೊಂದು ವಿಧದಲ್ಲಿ "ಕ್ರಿಸ್ತನೊಬ್ಬನೇ ಅಮರತ್ವವುಳ್ಳವನು" (1 ತಿಮೋ. 6:16) ಎಂದು ಪ್ರಕಟಿಸುವ ಮೂಲಕವಾಗಿ ದೇವದೂತರುಗಳಿಗೆ ಅಮರತ್ವ ಇದೆ ಎಂದು ಬೋಧಿಸುವುದಿಲ್ಲ. ತಂದೆಯು ಸದಾ ಇದಕ್ಕೆ ಹೊರತಾಗಿದ್ದಾನೆ (1 ಕೊರಿಂಥ 15:27). ನಾವೀಗಾಗಲೇ ನೋಡಿರುವಂತೆ, ನಮ್ಮ ಕರ್ತನಾದ ಯೇಸುವು ತನ್ನ ಪುನರುತ್ಥಾನದಲ್ಲಿ ಅಮರತ್ವವನ್ನು (ಇದೊಂದು ದೈವಸ್ವಭಾವದ ಅಂಶವಾಗಿದೆ) ಹೊಂದಿಕೊಂಡಿದ್ದಾನೆ. ಇದು ದೇವರ ಚಿತ್ತಕ್ಕೆ ವಿಧೇಯನಾಗಿ ತನ್ನ ಪ್ರಾಣವನ್ನೇ ಅರ್ಪಿಸಿದ – ಶಿಲುಬೆಯ ಮರಣದವರೆಗೂ ತೋರಿದ ಆತನ ಪ್ರಾಮಾಣಿಕತೆಗೆ ದೊರೆತ ಬಹುಮಾನವಾಗಿದೆ. ಈ ಕಾರಣದಿಂದ ದೇವರು ಆತನನ್ನು ಉನ್ನತ ಸ್ಥಿತಿಗೆ ಏರಿಸಿದ್ದಾನೆ. ಸದಾಕಾಲವೂ ಇತರರಿಗಿಂತ ಶ್ರೇಷ್ಟನಾಗಿದ್ದು, ದೇವರು ಪಡೆದ ಏಕೈಕ ಪುತ್ರನು ಆತನನ್ನು ಈ ಉನ್ನತಕ್ಕೆ ಏರಿಸಲಾಗಿದೆ. ಅಪೋಸ್ತಲನು ಹೇಳುವಂತೆ ದೇವರು ಯೇಸುವನ್ನು "ಸಕಲ ರಾಜತ್ವ ಅಧಿಕಾರ ಮಹತ್ವ ಪ್ರಭುತ್ವಾಧಿಗಳ ಮೇಲೆಯೂ, ಈ ಲೋಕದಲ್ಲಿ ಮಾತ್ರವಲ್ಲದೆ ಮುಂದೆ ಬರುವ ಲೋಕದಲ್ಲಿ ಸಹ ಹೆಸರುಗೊಂಡವರೆಲ್ಲರ ಮೇಲೆಯೂ ತನ್ನ ಬಲಗಡೆಯಲ್ಲಿ ಕೂಡ್ರಿಸಿಕೊಂಡನು" – ಎಫೆಸ 1:21.

ಈ ರೀತಿಯಾಗಿ, ಈ ಪ್ರಸ್ತಾಪದ ಬಗ್ಗೆ ದೇವರ ಸ್ವಂತ ಪ್ರಕಟನೆಯ ಮೂಲಕ ಆತನು ಮತ್ತು ಆತನು ಪಡೆದುಕೊಂಡ ಏಕೈಕ ಪುತ್ರನು ಮಾತ್ರವೇ ಈ ಅಮರತ್ವದ ಗುಣವನ್ನು ಹೊಂದಿಕೊಂಡಿದ್ದರು ಎಂದು ಅಪೋಸ್ತಲನು ಪತ್ರಿಕೆಗಳನ್ನು ಬರೆದ ಸಮಯದಲ್ಲಿ ಸ್ಪಷ್ಟವಾಗಿ ನಮಗೆ ತಿಳಿದುಬರುತ್ತದೆ. ನಿಜವಾಗಿಯೂ ದೇವರು ಪಡೆದ ಒಬ್ಬನೇ ಕುಮಾರನು ತಾನು ಉನ್ನತ ಸ್ಥಿತಿಗೆ ಏರುವ ಮುನ್ನವೇ ಅಮರತ್ವ ಉಳ್ಳವನಾಗಿದ್ದರೆ, ಆತನು ಈ ಲೋಕದ ರಕ್ಷಕನಾಗಲು ಸಾಧ್ಯವಿದ್ದಿಲ್ಲ ಯಾಕೆಂದರೆ ಆತನು ಸಾಯಲು ಸಾಧ್ಯವಿರುತ್ತಿದ್ದಿಲ್ಲ. ದೇವರ ವ್ಯವಸ್ಥೆಯಲ್ಲಿ ಆತನು ನಮ್ಮ ವಿಮೋಚಕನಾಗಬೇಕಾದರೆ ಆತನು ಸಾಯಲೇ ಬೇಕಿತ್ತು; ದಾಖಲೆಗಳ ಪ್ರಕಾರ **"ಆತನು ನಮ್ಮ ಪಾಪಗಳ ಸಲುವಾಗಿ ಸತ್ತನು"**. ನಂತರದಲ್ಲಿ ಆತನು ಜೀವಿತನಾಗಿ ಅಮರತ್ವಕ್ಕೆ ಏರಿಸಲ್ಪಟ್ಟನು.

ಹಳೆಯ ಒಡಂಬಡಿಕೆಯಲ್ಲಿ ಮುಂದಣ ನಿತ್ಯಜೀವಿತದ ನಿರೀಕ್ಷೆಗಳನ್ನು ಬಹಳ ಅಸ್ಪಷ್ಟವಾಗಿ ತಿಳಿಸಿವೆ ; ಅಮರತ್ವದ ಬಗ್ಗೆ ಅಷ್ಟರಮಟ್ಟಿಗೆ ಹೇಳಲ್ಪಟ್ಟಿರುವುದಿಲ್ಲ. ನಿಜವಾಗಿಯೂ, ಸ್ಫೂರ್ತಿಯುಳ್ಳ ಅಪೋಸ್ತಲನು ನಮ್ಮ ಕರ್ತನ ಬಗ್ಗೆ **"ಈತನು ಮರಣವನ್ನು ನಿವೃತ್ತಿಮಾಡಿ** (ಮಾನವರ ಮೇಲಿದ್ದ ಅದರ ಹಿಡಿತವನ್ನು ಮುರಿದುಹಾಕಿದನು) **ಸುವಾರ್ತೆಯ ಮೂಲಕ ಜೀವವನ್ನೂ, ನಿರ್ಲಯತ್ವವನ್ನೂ ಪ್ರಕಾಶಗೊಳಿಸಿದನು"** (2 ತಿಮೋ. 1:10) ಎಂದು ದೃಢವಾಗಿ ಹೇಳುತ್ತಾನೆ. ಇದು ಎರಡು ಸಂಗತಿಗಳನ್ನು ತೋರಿಸಿಕೊಡುತ್ತದೆ. (1) ಸರ್ವ ಸಂಪೂರ್ಣವಾದ ಜೀವನ, ಸದಾ ಕಾಲ ಇರುವ ಜೀವನ ಇದು ಅಮರತ್ವಕ್ಕಿಂತಲೂ, ಅವಿನಾಶಕರಕ್ಕಿಂತಲೂ ಬೇರೆಯಾದುದು. (2) ಈ ಮಹಾ ಆಶೀರ್ವಾದ ಗಳ್ಯಾವುದೂ ನಮ್ಮ ಕರ್ತನು ಮಹಾ ರಕ್ಷಣೆಯ ಬಗ್ಗೆ ಬೋಧಿಸುವ ಮೊದಲು ಬಹಿರಂಗ ಪಡಿಸಲಿಲ್ಲ ಅಥವಾ ಸುಲಭಸಾಧ್ಯವಾಗಿ ಮಾಡಲ್ಪಡಲಿಲ್ಲ. ಅತ್ಯಂತ ವಿಶೇಷ ರಕ್ಷಣೆಯ ಕರ್ತನಿಂದ ಮೊದಲು ಹೇಳಲ್ಪಟ್ಟಿತು – ಇಬ್ರಿಯ 2:3.

"ಜೀವ ಮತ್ತು ಅಮರತ್ವ"ಎಂಬ ಈ ಎರಡು ಮಹಾ ಆಶೀರ್ವಾದಗಳ ಬಗ್ಗೆ ನಮ್ಮ ಕರ್ತನ ಸುವಾರ್ತೆಯು ಏನನ್ನು ಬೆಳಕಿಗೆ ತಂದಿತು?

(ಅ) ದೈವೀಕ ಅನುಗ್ರಹದಿಂದ ನಮ್ಮ ಕರ್ತನು ಆದಾಮನ ಸಮಸ್ತ ಜನಾಂಗವನ್ನು ಕೊಂಡುಕೊಂಡನು ಮತ್ತು ಆ ಮೂಲಕ ಜನಾಂಗದ ಪ್ರತಿಯೊಬ್ಬ ಸದಸ್ಯನಿಗೂ ಮರಣದಿಂದ ಜೀವಕ್ಕೆ ಹಿಂತಿರುಗುವ ಅವಕಾಶವನ್ನು ಸಂಪಾದಿಸಿದನು – ಮತ್ತೊಂದು ಮಾತುಗಳಲ್ಲಿ "ಲೋಕಾದಿಯಿಂದ ದೇವರು ಎಲ್ಲಾ ಪ್ರವಾದಿಗಳ ಮೂಲಕ ನುಡಿದಂತೆ 'ಪುನಃಸಂಧಾನದ ಕಾಲ' ಬರುವುದನ್ನು ಪ್ರಕಟಿಸಿದನು. ಪುನಃ ಸಂಧಾನವು ಅದರ ಶ್ರೇಷ್ಟ ಮತ್ತು ಅಂತಿಮವಾದ ಅರ್ಥದಲ್ಲಿ ಪುನಃವಶಪಡಕೊಂಡವರನ್ನು ಸಮಾಧಿಯಿಂದ ಹೊರತರುವುದು ಮಾತ್ರವಲ್ಲ, ಕಾಯಿಲೆ ಮತ್ತು ಅಸಮರ್ಪಕತೆಗಳನ್ನು ಪ್ರತಿನಿಧಿಸಲ್ಪಡುವ ವಿವಿಧ ಶ್ರೇಣಿಯ ಮರಣಗಳಿಂದ ಪಾರುಮಾಡಿ, ಆದಾಮನು ಅವಿಧೇಯನಾಗುವ ಮೊದಲು ಅನುಭವಿಸುತ್ತಿದ್ದ ನಿತ್ಯಜೀವ ಸ್ಥಿತಿಗೆ ಮರಳುವುದು. ಕ್ರಿಸ್ತನ ಸುವಾರ್ತೆಯು ನಮಗೆ ನೂತನ ಒಡಂಬಡಿಕೆಯ ಉಚಿತವಾದ ಶರತ್ತುಗಳ ಮೇರೆಗೆ ಈ ಜೀವಕರ ಆಶೀರ್ವಾದವನ್ನು 'ಉಚಿತ ಸಮಯ'ದಲ್ಲಿ ಪಡೆಯುವುದನ್ನು ನಿಶ್ಚಿತಪಡಿಸುತ್ತದೆ – 1 ತಿಮೋ 2:6 .

(ಆ) ಕ್ರಿಸ್ತನ ಸುವಾರ್ತೆಯ 'ಬೆಳಕು' ದೇವರ ಯೋಜನೆಯಲ್ಲಿ 'ವಿಶೇಷವಾದ ಕರೆ'ಯ ಒಂದು ವಿಶೇಷವಾದ ಪೂರ್ವ ಸಿದ್ಧತೆಯನ್ನು ನಮಗೆ ತೋರಿಸಿಕೊಡುತ್ತದೆ. ಇದು ಆತನ ಸೃಷ್ಟಿಯಲ್ಲಿ ಅಲ್ಪಸಂಖ್ಯೆಯರನ್ನು ನೀತಿ ಮತ್ತು ತರ್ಕಸಮ್ಮತಕ್ಕೂ ಹೆಚ್ಚಾಗಿ ಆತನ ಹೋಲಿಕೆಗೆ ತಕ್ಕಂತೆ – ತಂದೆಯ ಚಿತ್ತಕ್ಕೆ ಅವರುಗಳನ್ನು ಅನುವರ್ತಿಸುವಂತೆ ಮತ್ತು ಆ ಮೂಲಕ ಅವರ ನಿಷ್ಠಾವಂತ ವಿಧೇಯತೆಯನ್ನು ರುಜುವಾತು ಪಡಿಸುವಂತೆ ಆತನ ವ್ಯಕ್ತಿತ್ವದ ಸ್ಪಷ್ಟೋಕ್ತವಾದ ಸ್ವರೂಪಕ್ಕೆ ತಕ್ಕಂತೆ ಅವರನ್ನು ನೂತನ ಸೃಷ್ಟಿಗಳನ್ನಾಗಿ ಮಾಡುತ್ತದೆ – ಇದರ ಬಹುಮುಖ್ಯವಾದ ಮತ್ತು ಮೂಲಭೂತವಾದ ಅಂಶವೆಂದರೆ 'ಅಮರತ್ವ'. ಇದನ್ನು ನಮ್ಮ ಕರ್ತನಾದ ಯೇಸುವು ದೇವರ ಕೃಪಾ ಸುವಾರ್ತೆಯಲ್ಲಿ ಪ್ರಸ್ತಾಪಿಸಿದ್ದಾನೆ, ಹಾಗೂ ಬೆಳಕಿಗೆ ತಂದಿದ್ದಾನೆ.

ವಿಸ್ಮಯದೊಡನೆ ನಾವು ವಿಚಾರಿಸುವುದೇನೆಂದರೆ – ದೇವರ ಯಾವ ಪವಿತ್ರರಿಗಾದರೂ – ದೇವದೂತರು ಗಳಿಗೋ, ಕೆರೂಬಿಯರಿಗೋ, ಸರಾಫಿ ಯರಿಗೋ – ಅಥವಾ ಮತ್ತ್ಯಾರಿಗೋ ಈ ಉನ್ನತವಾದ ಕರೆಯು ನೀಡಲ್ಪಟ್ಟಿತೋ ? ಕ್ರಿಸ್ತನ ಸುವಾರ್ತೆಯ ಉತ್ತರವೇನೆಂದರೆ ಇದು ಯಾವ ದೇವದೂತರಿಗೂ ನೀಡಲ್ಪಡಲಿಲ್ಲ, ಆದರೆ ಮನುಷ್ಯ ಕುಮಾರನಿಗೂ ಮತ್ತು ಆತನು ತನ್ನ ಸ್ವಂತ ರಕ್ತಚೆಲ್ಲಿ ವಿಮೋಚಿಸಿದವರಲ್ಲಿ ಆಯ್ದುಕೊಳ್ಳುವ ಆತನ 'ಮದಲಗಿತ್ತಿ'ಗೇ ನೀಡಲ್ಪಟ್ಟಿತು.

ಆತನ ಮುಂದಿರುವ ಸಂತೋಷವನ್ನು ಹೊಂದಿಕೊಳ್ಳುವುದಕ್ಕಾಗಿ ಶಿಲುಬೆಯನ್ನು, ನಿಂದನೆ ಅಪಮಾನವನ್ನು ಸಹಿಸಿಕೊಂಡವನನ್ನು ಪರಿಗಣಿಸಿರಿ. ಅದರ ಪರಿಣಾಮವಾಗಿ ಆತನು ದೇವರ ಸಿಂಹಾಸನದ ಬಲಪಾರ್ಶ್ವದಲ್ಲಿ ಕುಳಿತುಕೊಂಡಿದ್ದಾನೆ (ಇದೊಂದು ಸೌಭಾಗ್ಯದ ಸ್ಥಾನವಾಗಿದೆ). ಆತನು ಐಶ್ವರ್ಯವಂತ ನಾಗಿದ್ದನು, ಆದರೆ ನಮ್ಮ ಸಲುವಾಗಿ ಆತನು ಬಡವನಾದನು. ಆತನು ವಿಮೋಚಿಸಬೇಕಾದ ಮನುಷ್ಯರು ಮಾನವ ಜನಾಂಗವಾದುದರಿಂದ ಆತನು ಅವರ

ಈಡುಬಲಿಯ ಕ್ರಯವನ್ನು ಅಥವಾ ಸೂಕ್ತ ಬೆಲೆಯನ್ನು ತೆರುವ ಸಲುವಾಗಿ ಮಾನವನಾಗುವುದು ಅವಶ್ಯವಾಗಿತ್ತು. ಆದುದರಿಂದ ಆತನು ತನ್ನನ್ನು ದೀನನಾಗಿಸಿಕೊಂಡು ದಾಸನ ರೂಪವನ್ನು ಧರಿಸಿಕೊಂಡನು; ನಂತರದಲ್ಲಿ ಆತನು ತನ್ನನ್ನು ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡು ತನ್ನನ್ನು ಮರಣದ ತನಕ ಅತ್ಯಂತ ಅವಮಾನಕರವಾದ ಮರಣಕ್ಕೂ ಅಂದರೆ ಶಿಲುಬೆಯ ಮರಣಕ್ಕೂ ತಗ್ಗಿಸಿಕೊಂಡನು. ಈ ಕಾರಣದಿಂದ ದೇವರು ಆತನನ್ನು ಉನ್ನತ ಸ್ಥಿತಿಗೆ (ಪುನರುತ್ಥಾನದಲ್ಲಿ ವಾಗ್ದತ್ತ ದೈವ ಸ್ವಭಾವಕ್ಕೆ) ಏರಿಸಿದನು ಮತ್ತು ತನ್ನ ಹೆಸರನ್ನು ಹೊರತುಪಡಿಸಿ (1 ಕೊರಿಂಥ 15:27) ಬೇರೆಲ್ಲಾ ಹೆಸರಿಗಿಂತಲೂ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದನು – ಇಬ್ರಿಯ 12:3, 2:2 ಕೊರಿಂಥ 8:9, ಫಿಲಿಪ್ಪಿ 2:8,9.

**"ವಧಿತನಾದ ಕುರಿಯಾದಾತನು ಬಲ, ಐಶ್ವರ್ಯ, ಜ್ಞಾನ, ಸಾಮರ್ಥ್ಯ, ಮಾನ, ಪ್ರಭಾವ, ಸ್ತೋತ್ರಗಳನ್ನು ಹೊಂದುವುದಕ್ಕೆ ಯೋಗ್ಯನು"** – ಪ್ರಕಟನೆ 5:9–12.

ದೇವರ ಸೌಭಾಗ್ಯದ ಸಮೃದ್ಧಿಯು ಈ ಮಹಾ ಹಾಗೂ ಯೋಗ್ಯನಾದಾತನನ್ನು ಉನ್ನತಸ್ಥಿತಿಗೆ ಏರಿಸುವುದರಲ್ಲಿ ಸ್ಥಗಿತಗೊಳ್ಳಬಹುದಿತ್ತು; ಆದರೆ ಹಾಗಾಗಲಿಲ್ಲ, ತಂದೆಯಾದ ದೇವರು ಕರ್ತನಾದ ಯೇಸುವು ಒಬ್ಬ ನಾಯಕನಂತೆ ದೇವರ ಪುತ್ರರ ಸಮೂಹನ್ನು **"ಪ್ರಭಾವ, ಮಾನ ಮತ್ತು ನಿರ್ಲಯತ್ವಕ್ಕೆ"** (ರೋಮಾ. 2:7 ಮತ್ತು ಇಬ್ರಿಯ 2:10) ಮತ್ತು ಇವರಲ್ಲಿ ಪ್ರತಿಯೊಬ್ಬರೂ ಹೇಗೂ ಆತ್ಮಿಕ ಪ್ರತಿರೂಪವಾಗುವಂತೆ ಅಥವಾ ಚೊಚ್ಚಲ ಮಕ್ಕಳಾಗಿ ನಡೆಸುವ ವ್ಯವಸ್ಥೆಮಾಡಿದನು. ದೇವರ ಸಾರ್ವಭೌಮತ್ವದ ಭವ್ಯವಾದ ಪಾಠವೆಂಬಂತೆ, ಮತ್ತು ಎಲ್ಲಾ ಉದಾತ್ತವಾದ ವಿಕಸನ ವಿಚಾರಸರಣಿಗಳಿಗೆ ವ್ಯತಿರಿಕ್ತತೆಯಲ್ಲಿ ದೇವರು ಈ ಗೌರವದ ಸ್ಥಾನದವರನ್ನು 'ಮದಲಗಿತ್ತಿ', ಕುರಿಮರಿಯ ವಧು ಮತ್ತು ಸಹ ಬಾಧ್ಯಸ್ಥರು (ಪ್ರಕಟನೆ 21:2,9, ರೋಮಾ. 8:19) ಎಂಬುದಾಗಿ ಕರೆದನೇ ಹೊರತು ದೇವದೂತರೆಂದಾಗಲೀ, ಕೆರೂಬಿ ಸೆರಾಫಿಯರೆಂದಾಗಲೀ ಅಲ್ಲ, ಆದರೆ ಕುರಿಮರಿಯ ರಕ್ತದಿಂದ ವಿಮೋಚನೆಗೊಂಡ 'ಎಣಿಸಲ್ಪಟ್ಟವರು' ಎಂಬುದಾಗಿ. ಹಾಗೆ ಉನ್ನತ ಸ್ಥಿತಿಗೆ ಏರಿಸಲ್ಪಡುವವರ ಸಂಖ್ಯೆಯನ್ನೂ ದೇವರು ನಿಷ್ಕರ್ಷಿಸಿದನು – **"ಅವರ ಸಂಖ್ಯೆ ಒಂದು ಲಕ್ಷ ನಾಲ್ವತ್ತು ನಾಲ್ಕು ಸಾವಿರ ಮಂದಿ"** (ಪ್ರಕಟನೆ 7:4) ಮತ್ತು ಅವರುಗಳು ಆ ಹೆಚ್ಚಿನ ಗೌರವಕ್ಕೆ ಪಾತ್ರರಾಗುವವರ ಸಮೂಹದಲ್ಲಿ ತಮ್ಮ ಸ್ಥಾನವನ್ನು ಖಚಿತಪಡಿಸಿಕೊಳ್ಳಲು ಕರೆಯುಳ್ಳವರ ಗುಣಲಕ್ಷಣಗಳು ಹೇಗಿರಬೇಕೆಂದು ದೇವರು ಪೂರ್ವ ನಿರ್ಧಾರ ಕೈಗೊಂಡನು. ಉಳಿದ ಕಾರ್ಯಗಳನ್ನು ಕ್ರಿಸ್ತನಿಗೆ ವಹಿಸಲ್ಪಟ್ಟಿದೆ. ಆತನು ತನ್ನ ತಂದೆಯು ಇಲ್ಲಿಯವರೆಗೂ ಮಾಡಿದಂತೆ ತಾನೂ ಕೆಲಸಮಾಡುವವನಾಗಿದ್ದಾನೆ – ಯೋಹಾನ 5:17.

ಪಂಚಾಶತ್ತಮ ದಿನದಿಂದ ಎರಡನೆಯ ಬರೋಣದಲ್ಲಿ ಸ್ಥಾಪಿಸಲ್ಪಡುವ ರಾಜ್ಯದ ಅವಧಿಯವರೆಗೂ ಇರುವ ಸುವಾರ್ತಾ ಯುಗವು ಕ್ರಿಸ್ತನ ಮದಲಗಿತ್ತಿಯಾದ ವಧುವನ್ನು ಆರಿಸಿಕೊಳ್ಳುವ ಸಮಯವಾಗಿದೆ. ಈ ವರ್ಗವನ್ನು ವಿವಿಧ ರೀತಿಯಲ್ಲಿ 'ಸಭೆ' 'ಕ್ರಿಸ್ತನ ದೇಹ', 'ರಾಜವಂಶಸ್ಥ ಯಾಜಕವರ್ಗದವರು', ಅಬ್ರಹಾಮನ ಸಂತಾನದವರು (ಗಲಾತ್ಯ 3:29) ಮುಂತಾಗಿ ಕರೆಯಲಾಗುತ್ತದೆ, ಕೆಡುಕು ಮುಂದುವರೆಯಲು ಅನುಮತಿಸುವ ಕಾರಣದಿಂದಾಗಿ ಈ ಕ್ರಿಸ್ತನ ದೇಹದ ಅಂಗಗಳ ಅಭಿವೃದ್ಧಿಯಾಗುವ ಉದ್ದೇಶದಿಂದಾಗಿ ಮತ್ತು ಅವರಲ್ಲಿರುವ ಅಲ್ಪವನ್ನು ತನ್ನ ಅಮೂಲ್ಯರಕ್ತದ ಮೂಲಕ ನಮ್ಮನ್ನು ಕೊಂಡುಕೊಂಡಾತನ ಸೇವೆಯಲ್ಲಿ ಸಮರ್ಪಿಸಿ ಎಲ್ಲರೂ ವಿಮೋಚಿಸುವಂತೆ ಮಾಡುವುದಾಗಿದೆ ಮತ್ತು ಈ ರೀತಿಯಲ್ಲಿ ಅವರ ಹೃದಯಗಳಲ್ಲಿ ಆತನ ಆತ್ಮಿಕ ಹೋಲಿಕೆಯು ಅಭಿವೃದ್ಧಿಗೊಳ್ಳುತ್ತದೆ ಮತ್ತು ಯುಗದ ಅಂತ್ಯವು ಬರುವಾಗ ಅವರನ್ನು ಅವರ ಕರ್ತನೂ, ವಿಮೋಚಕನೂ ತನ್ನ ತಂದೆಯ ಮುಂದೆ ನಿಲ್ಲಿಸುವವನಾಗಿದ್ದಾನೆ ಮತ್ತು ದೇವರು ಅವರಲ್ಲಿ ತನ್ನ ಮಗನ ಸ್ವಾರೂಪ್ಯವನ್ನು ಕಾಣಲಿರುವನು –ಕೊಲೊಸ್ಸೆ 1:22 ಮತ್ತು ರೋಮಾ. 8:29.

'ಪ್ರಭಾವ, ಮಾನ ಮತ್ತು ನಿರ್ಲಯತ್ವ'ಗಳ ಮತ್ತು ದೈವೀಕ ಸ್ವಭಾವದ ಎಲ್ಲಾ ಲಕ್ಷಣಗಳ ಪ್ರತಿಫಲವು **"ಪ್ರಥಮವಾಗಿ ಪಡಕೊಂಡವನಿಗೆ"** ಆತನು ತನ್ನ ಕಾರ್ಯಕ್ರಮದಲ್ಲಿ ಸ್ವಯಾರ್ಪಣೆಯಾಗಿ ತನ್ನನ್ನೇ ಮರಣಕ್ಕೆ ಒಪ್ಪಿಸುವಷ್ಟು ವಿಧೇಯನಾಗುವವರೆಗೆ ದಯಪಾಲಿಸಿರಲಿಲ್ಲ. ಅದೇ ಕಾರಣ ಅದರಂತೆ ಸಭೆಗೂ, ಆತನ ವಧುವಿಗೂ ಸಹ ಒಂದಾಗಿ ಪರಿಗಣಿಸಲ್ಪಡುತ್ತದೆ ಮತ್ತು ಒಟ್ಟಾಗಿ ವ್ಯವಹರಿಸಲಾಗುತ್ತದೆ. ಚೊಚ್ಚಲ ಮಗನೂ, ನಾಯಕನೂ ಆದ ನಮ್ಮ ಕರ್ತನು ತನ್ನ ಪುನರುತ್ಥಾನದಲ್ಲಿ ಈ ಮಹಿಮೆಗೆ ಸೇರಿಸಲ್ಪಟ್ಟನು; ಆತನು ಸತ್ತವರೊಳಗಿಂದ ಜೀವಿತನಾಗಿ, ಆತ್ಮನಿಂದ ಜನಿಸಿದವನಾಗಿ ಅಲ್ಲಿ ದೇವರ ಸ್ವಭಾವದಲ್ಲಿ ಪೂರ್ಣ ಭಾಗಿಧಾರಿಯಾದನು. ಆತನು ಅಲ್ಲಿ ಸಿಂಹಾಸನಕ್ಕೆ ಏರಿಸಲ್ಪಟ್ಟನು ಮತ್ತು ದೇವರ ಬಲಪಾರ್ಶ್ವದಲ್ಲಿ ಕುಳಿತುಕೊಳ್ಳುವ ದೇವರ ಮಹಾ ಸೌಭಾಗ್ಯಕ್ಕೆ ಪಾತ್ರನಾದನು ಮತ್ತು ಆತನು ತನ್ನ ಸಭೆ, ತನ್ನ ವಧು ಸಹಾ ಪುನರುತ್ಥಾನದಲ್ಲಿ ದೇವರ ಶಕ್ತಿಯ ಮೂಲಕ ಮಾನವ ಸ್ವಭಾವದಿಂದ ದೈವೀಕ ಮಹಿಮೆಗೆ ಬದಲಾವಣೆಗೊಂಡು ಆತನ ಪ್ರಭಾವ, ಮಾನ ನಿರ್ಲಯತ್ವಗಳನ್ನು ಪಡಕೊಳ್ಳುವರು ಎಂದು ವಾಗ್ದಾನಮಾಡಿದ್ದಾನೆ – ಇಬ್ರಿಯ 13:20; 2 ಪೇತ್ರ 1:4.

ಆದುದರಿಂದ ಸಭೆಯ 'ಪುನರುತ್ಥಾನ'ದ ಬಗ್ಗೆ:- **"ದೇಹವು ಲಯಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ನಿರ್ಲಯಾವಸ್ಥೆಯಲ್ಲಿ ಎದ್ದು ಬರುವುದು. ಹೀನಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ಮಹಿಮೆಯಲ್ಲಿ ಎದ್ದು ಬರುವುದು; ಪ್ರಾಕೃತ ದೇಹವಾಗಿ ಬಿತ್ತಲ್ಪಡುತ್ತದೆ, ಆತ್ಮೀಕ ದೇಹವಾಗಿ ಎದ್ದುಬರುವುದು"** ಎಂದು ಬರೆದದೆ - 1 ಕೊರಿಂಥ 42-44; 49.

ಈ ಭಾಗ್ಯಕರ ಸ್ಥಾನಕ್ಕೆ ತಮ್ಮ ಕರೆಯನ್ನು ಖಚಿತಪಡಿಸಿಕೊಂಡವರೆಲ್ಲರ ಮೇಲೆ ವಿಧಿಸಲ್ಪಟ್ಟಿರುವ ಷರತ್ತುಗಳು ಪರಂತು ಒಂದು ಸಮಂಜಸವಾದ ಸೇವೆ ಮಾಡಲು ನಿರ್ಬಂಧಕ್ಕೊಳಗಾಗಿದ್ದಾರೆ. ಮತ್ತು ಮೊಳಕೆಯಿಂದಲೇ ಪ್ರಾಮಾಣಿಕರಿಗೆ ದೈವ ಸ್ವಭಾವದ "ಮಾನ, ಮಹಿಮೆ ಮತ್ತು ನಿರ್ಲಯತ್ವ"ಗಳು ವಾಗ್ದಾನಿಸಲ್ಪಟ್ಟಿವೆ. - ಆ ರೀತಿಯಲ್ಲಿ ಅವರು ಕೇಡು ವಿಜೃಂಭಿಸಿರುತ್ತಿರುವ ಈ ಪ್ರಸ್ತುತ ಕಾಲದಲ್ಲಿ ಆತನ ಹೆಜ್ಜೆಜಾಡಿನಲ್ಲಿ ನಡೆಯುವುದರಿಂದ, ಹಾಗೂ ಆತನ ವಿಮೋಚಕನ ಮಾದರಿಯನ್ನು ಅನುಸರಿಸುವುದರಿಂದ ಆತನ ಅಪಮಾನದಲ್ಲಿ ಪಾಲುದಾರರಾದರೆ, ಅತ್ಯಂತ ಉನ್ನತವಾದ ಹಾಗೂ ದೇವದೂತರುಗಳಿಗೂ ಮಿಗಿಲಾದ ಘನತೆಗೆ ಅವರು ಪಾಲುದಾರರಾಗುತ್ತಾರೆ.

ನಿರ್ಲಯತ್ವದ ನಿರೀಕ್ಷೆ ಮತ್ತು ಪ್ರತಿಯೊಂದು ವಾಗ್ದಾನ ಅಥವಾ ಸಲಹೆಯೂ ಕರ್ತನ ಮಾತುಗಳೂ ಈ ವಿಶೇಷವಾದ ಆಯ್ಕೆಗೊಂಡ ಸಭೆಯವರಿಗೆ ಅನ್ವಯವಾಗುತ್ತದೆ ಎಂಬುದನ್ನು ಗಮನಿಸಿರಿ. ನಮ್ಮ ಕರ್ತನು ಸೂಚಿಸಿರುವ ಈ ಜೀವಿತವು ಸ್ವಯಂಸಿದ್ಧವಾದ ಜೀವಿತವಾಗಿದೆ ಎಂದು **"ತಂದೆಯು ತಾನು ಹೇಗೆ ಸ್ವತಃ ಜೀವವುಳ್ಳವನಾಗಿದ್ದಾನೋ ಪೋಷಣೆಯ ಅವಶ್ಯಕತೆಯಿರದ - ನಿರ್ಲಯತ್ವ ಹಾಗೆಯೇ ಮಗನೂ ಜೀವವುಳ್ಳನಾಗುವಂತೆ ಮಾಡಿದನು" (ಅಮರತ್ವ)** (ಯೋಹಾನ 5:26). **"ಹಾಗೂ ಆತನು ಯಾರಿಗೆ ಬೇಕಾದರೂ ಕೊಡಬಹುದು - ಆತನ ವಧು, ಆತನ ಸಭೆ + ಶರೀರದ ಸದಸ್ಯರು" "ಅನ್ಯಜನರು ಸುವಾರ್ತೆಯು ಮೂಲಕವಾಗಿ ಕ್ರಿಸ್ತಯೇಸುವಿನಲ್ಲಿರುವವರಿಗಾಗಿ ಯೆಹೂದ್ಯರೊಂದಿಗೆ ಬಾಧ್ಯರೂ, ಒಂದೇ ದೇಹದೊಳಗಣ ಅಂಗಗಳೂ, ಅಬ್ರಹಾಮನಿಗುಂಟಾದ ವಾಗ್ದಾನದಲ್ಲಿ ಪಾಲುಗಾರರೂ ಆಗಿದ್ದಾರೆ"** (ಎಫೆಸ 3:6) ಎಂಬ ಸತ್ಯವೇದದ ಮಾತುಗಳಿಂದ ತಿಳಿದು ಬರುತ್ತದೆ.

ಕೆಳಗಣ ಎರಡು ಗ್ರೀಕ್ ಪದಗಳನ್ನು 'ನಿರ್ಲಯತ್ವ' ಎಂಬುದಾಗಿ ಭಾಷಾಂತರಿಸಲಾಗಿದೆ :-

(1) ***Athanasia*** : ಇದು ಪ್ರಭಲವಾಗಿ "ಮರಣವಿಲ್ಲದಿರುವಿಕೆ" ಎಂಬ ಅರ್ಥ ನೀಡುತ್ತದೆ. ಈ ಪದವು ಕೆಳಗಣ ದೇವರ ವಾಕ್ಯಗಳಲ್ಲಿ ಮಾತ್ರವೇ ಕಂಡು ಬರುತ್ತದೆ :

**"ಲಯವಾಗುವ ಈ ದೇಹವು ನಿರ್ಲಯತ್ವವನ್ನು ಧರಿಸಿಕೊಳ್ಳುವುದೂ, ಮರಣಾಧೀನವಾಗಿರುವ ಈ ದೇಹವು ಅಮರತ್ವವನ್ನು ಧರಿಸಿಕೊಳ್ಳುವುದು ಅವಶ್ಯ"** (1 ಕೊರಿಂಥ 15:53) ಇಲ್ಲಿ ನಿರ್ಲಯತ್ವದಲ್ಲಿ ಸಭೆಯು ಪಾಲುತೆಗೆದುಕೊಳ್ಳುವುದು ಎಂದು ಸೂಚಿಸಲಾಗಿದೆ.

**"ಲಯವಾಗುವ ಈ ದೇಹವು ನಿರ್ಲಯತ್ವವನ್ನು ಧರಿಸಿಕೊಂಡಾಗ, ಮರಣಾಧೀನವಾಗಿರುವ ಈ ದೇಹವು ಅಮರತ್ವವನ್ನು ಧರಿಸಿಕೊಂಡಾಗ ಬರೆದಿರುವ ಮಾತು ನೆರವೇರುವುದು"** (1 ಕೊರಿಂಥ 15:54). ಇದು ಅದೇ ಸಭೆಯ ಪ್ರಥಮ ಪುನರುತ್ಥಾನವನ್ನು ಸೂಚಿಸುತ್ತದೆ.

**"ತಾನೊಬ್ಬನೇ ಅಮರತ್ವವುಳ್ಳವನೂ ಅಗಮ್ಯವಾದ ಬೆಳಕಿನಲ್ಲಿ ವಾಸಮಾಡುವವನೂ ಆಗಿದ್ದಾನೆ"** (1 ತಿಮೋ. 6:16). ಎಂದಿನಂತೆ ತಂದೆಯೊಂದಿಗೆ ಹೋಲಿಸುವುದನ್ನು ಹೊರತು ಪಡಿಸಿ ಇದು ನಮ್ಮ ಕರ್ತನಾದ ಯೇಸುವಿಗೆ ಸೂಚಿತವಾಗಿದೆ.

(2) ***Aptharsia and apthartos*** (ಅದೇ ಮೂಲದಿಂದ) ಈ ಗ್ರೀಕ್ ಪದಗಳನ್ನು ಸಹಾ 'ನಿರ್ಲಯತ್ವ' ಎಂಬುದಾಗಿ ಎರಡು ಬಾರಿ ಮತ್ತು 'ನಿರ್ಲಯ' ಎಂಬುದಾಗಿ ಒಂದು ಬಾರಿ ಭಾಷಾಂತರಿಸಲಾಗಿದೆ. ಆದರೆ ಇದನ್ನು ಇನ್ನೂ ಉಚಿತವಾಗಿ 'ಕೆಡಿಸಲಾಗದಿರುವಿಕೆ' ಅಥವಾ 'ಕೆಡಿಸಲಾಗದ್ದು' *(Incorruption and incorruptible)* ಎಂಬುದಾಗಿ ಭಾಷಾಂತರಿಸಬಹುದು. ಸಾಮಾನ್ಯವಾಗಿ *Lexicographers* ಇದನ್ನು ಈ ರೀತಿಯಲ್ಲೇ ಬಳಸುತ್ತಾರೆ. ಸತ್ಯವೇದದಲ್ಲಿನ ಈ ಕೆಳಕಂಡ ವಚನಗಳಲ್ಲಿ ಇವು ಕಂಡುಬರುತ್ತವೆ :-

**"ಯಾರು ಪ್ರಭಾವ ಮಾನ ನಿರ್ಲಯತ್ವಗಳನ್ನು ಹೊಂದಬೇಕೆಂದು ಒಳ್ಳೇದನ್ನು ಬೇಸರಗೊಳ್ಳದೇ ಮಾಡುತ್ತಾರೋ ಅವರಿಗೆ ನಿತ್ಯಜೀವವನ್ನು ಕೊಡುವನು"** - ರೋಮಾ. 2:7.

**"ದೇಹವು ಲಯಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ನಿರ್ಲಯಾವಸ್ಥೆಯಲ್ಲಿ ಎದ್ದುಬರುವುದು"** - 1 ಕೊರಿಂಥ 15:42.

**"ರಕ್ತವೂ ಮಾಂಸವೂ ದೇವರ ರಾಜ್ಯಕ್ಕೆ ಬಾಧ್ಯವಾಗಲಾರವು ; ಲಯವಾಗುವ ವಸ್ತುವು ನಿರ್ಲಯ ಪದವಿಗೆ ಬಾಧ್ಯವಾಗುವುದಿಲ್ಲ"** - 1 ಕೊರಿಂಥ 15:50.

**"ಲಯವಾಗುವ ಈ ದೇಹವು ನಿರ್ಲಯತ್ವವನ್ನು (aptharsia) ಧರಿಸಿಕೊಳ್ಳುವುದೂ ಮರಣಾಧೀನವಾಗಿರುವ ಈ ದೇಹವು ಅಮರತ್ವವನ್ನು ಧರಿಸಿಕೊಳ್ಳುವುದು ಅವಶ್ಯ"** - 1 ಕೊರಿಂಥ 15:53.

**"ಲಯವಾಗುವ ಈ ದೇಹವು ನಿರ್ಲಯತ್ವವನ್ನು (aptharsia) ಧರಿಸಿಕೊಂಡಾಗ . . . ."** – 1 ಕೊರಿಂಥ 15:54.

**"ನಮ್ಮ ಕರ್ತನಾದ ಯೇಸುಕ್ರಿಸ್ತನನ್ನು ನಿರಂತರವಾದ ಪ್ರೀತಿಯಿಂದ ಪ್ರೀತಿಸುವವರೆಲ್ಲರ ಮೇಲೆ ದೇವರ ಕೃಪೆಯು ಇರಲಿ" (aptharsia-incorruptly)** – ಎಫೆಸ 6:24.

**"ಈತನು ಮರಣವನ್ನು ನಿವೃತ್ತಿಮಾಡಿ ಸುವಾರ್ತೆಯ ಮೂಲಕ ಜೀವವನ್ನೂ, (aptharsia-incorruptly) ನಿರ್ಲಯುತ್ವವನ್ನೂ ಪ್ರಕಾಶಗೊಳಿಸಿದನು"** – 2 ತಿಮೋ. 1:10.

**"ನೀನು ಮಾಡುವ ಉಪದೇಶದಲ್ಲಿ ಯಥಾರ್ಥವೂ, ಗೌರವವೂ, ಆಕ್ಷೇಪಣೆಗೆ ಆಸ್ಪದವಿಲ್ಲದಂಥ ಸ್ವಸ್ಥಬುದ್ಧಿಯೂ ಇರಬೇಕು"** – ತೀತ 2:7 **(apthartos-incorruptly).**

**"ಲಯವಿಲ್ಲದ ದೇವರ ಮಹಿಮೆಯನ್ನು ಬಿಟ್ಟು . . . . ."** ರೋಮಾ 1:23. **(aptharsia-incorruptly)**

**"ನಾವಾದರೋ ಬಾಡಿಹೋಗದ ಜಯಮಾಲಿಕೆಯನ್ನು ಹೊಂದುವುದಕ್ಕೆ ಸಾಧನೆಮಾಡುವವರಾಗಿದ್ದೇವೆ" (apthartos)** – 1 ಕೊರಿಂಥ 9:25.

**"ತುತೂರಿ ಊದಲಾಗಿ ಸತ್ತವರು ನಿರ್ಲಯರಾಗಿ (apthartos) ಎಬ್ಬಿಸಲ್ಪಡುವರು"** – 1 ಕೊರಿಂಥ 15:52.

**"ಸರ್ವಯುಗಗಳ ಅರಸನೂ ನಿರ್ಲಯನೂ ಅದೃಶ್ಯನೂ ಆಗಿರುವ ಏಕದೇವರಿಗೆ ಯುಗಯುಗಾಂತರ ಗಳಲ್ಲಿಯೂ ಮಾನ ಪ್ರಭಾವಗಳಿರಲಿ" (apthartos-incorruptly)** – 1 ತಿಮೋ. 1:17.

**"ನಮ್ಮನ್ನು ಲಯುಕಳಂಕ ಕ್ಷಯುಗಳಿಲ್ಲದ ಬಾಧ್ಯತೆಯನ್ನು ಎದುರು ನೋಡುವವರನ್ನಾಗಿ ಮಾಡಿದನು" (aptharsia - incorruptly)** – 1 ಪೇತ್ರ 1:4.

**"ಆ ಜನ್ಮವು ನಾಶವಾಗುವ ಬೀಜದಿಂದ ಉಂಟಾದುದಲ್ಲ, ನಾಶವಾಗದ ಬೀಜದಿಂದಲೇ ಉಂಟಾದದ್ದು"** – 1 ಪೇತ್ರ 1:23.

**"ಇದು ಶಾಶ್ವತವಾದದ್ದೂ, ದೇವರ ದೃಷ್ಟಿಗೆ ಬಹು ಬೆಲೆಯುಳ್ಳದ್ದೂ ಆಗಿದೆ" (apthartos-incorruptly)** – 1ಪೇತ್ರ 3:4.

ಈ ಪದದಲ್ಲಿರುವ ಆಲೋಚನೆಯೆಂದರೆ – ನಾಶವಾಗದ್ದು, ಕೊಳೆತುಹೋಗದ್ದು, ಬೆಲೆ ಕಳಕೊಳ್ಳದ್ದು. ಈ ರೀತಿಯಾಗಿ Apthartosವು ಚೇತನಾಯುಕ್ತ ಜೀವಿಗಳಿಗೆ ಅನ್ವಯಿಸುವಾಗ ನಾನಾ ವಿಧದಲ್ಲಿ Athanasiaಕ್ಕೆ ಅಥವಾ 'ಮರಣವಿಲ್ಲದಿರುವಿಕೆ'ಗೆ ಸಮವಾಗಿದೆ. ಆದುದರಿಂದ ಮರಣವಿಲ್ಲದ ಜೀವನವನ್ನು ನಿಜವಾಗಿಯೂ ನಿಷ್ಕಳಂಕವಾದುದು ಅಥವಾ ದೂಷಿತವಲ್ಲದ್ದು ಎನ್ನಬಹುದಾಗಿದೆ.

## ನಿತ್ಯಜೀವಕ್ಕಾಗಿ ಮಾನವ ಜಾತಿಯ ನಿರೀಕ್ಷೆ
## Mankind's Hope For Everlasting Life

ಹೆಚ್ಚು ಧೈರ್ಯಶಾಲಿ ಮತ್ತು ಅತ್ಯಂತ ಸಮರ್ಥರಾದ ವಿಜ್ಞಾನಿಗಳು ಮತ್ತು ವಿಕಾಸವಾದಿಗಳು ಮಾನವ ಜೀವಿತವು ಸೃಷ್ಟಿಕರ್ತನ ಕೊಡುಗೆಯಲ್ಲ ಎಂಬುದನ್ನು ತೋರಿಸಲು ಪ್ರಯಾಸಪಟ್ಟಿದ್ದಾರೆ. ಅವರು ಮನುಷ್ಯ ಮತ್ತು ಕೆಳವರ್ಗದ ಪ್ರಾಣಿಗಳು ಸೂಕ್ಷ್ಮದರ್ಶಕವಾದ ಏಕಾಣು ಜೀವಿಗಳಿಂದ ವಿಕಾಸಗೊಂಡವುಗಳೆಂದು ತಾತ್ವಿಕವಾಗಿ ಹೇಳುತ್ತಾರೆ; ಹೌದು, ಪ್ರೊ॥ ಹಕ್ಸಲಿ ಎಂಬಾತನು ಹೇಳುವಂತೆ **"ಪ್ರೋಟೊಪ್ಲಾಸಂ ಎಂಬುದು ಜೀವಕ್ಕೆ ಪ್ರಾಕೃತಿಕ ಬುನಾದಿಯಾಗಿದೆ"** ಅವರ ಈ ಸಂತಷ್ಟುವಿಕೆಯು ಹೇಗೋ ಏನೋ ಅನಿವಾರ್ಯವಾಗಿ ಒಂದು ರೀತಿಯಲ್ಲಿ ಸೃಷ್ಟಿಕರ್ತನನ್ನು ಅಂದರೆ ಜೀವದಾಯಕನನ್ನು ಸಂಪೂರ್ಣವಾಗಿ ನಿರ್ಲಕ್ಷಿಸುತ್ತದೆ; ಆದರೆ ನಿಜ ಸಂಗತಿಯೆಂದರೆ, ಪ್ರೋಟೋಪ್ಲಾಸಂ ಸಹಾ ತನ್ನ ಜೀವವನ್ನು ಜಡ ವಸ್ತುವಿನಿಂದ ಪಡಕೊಂಡಿದೆ ಎಂಬುದನ್ನು ಅವರು ಸಲಹೆ ಮಾಡಲಾರರು. ಈ ತನಕವಾದರೂ ಅವರು ಜೀವದ ಮೊದಲ ಮಹಾಕಾರಣವನ್ನು ಗ್ರಹಿಸಲು ಬಂಧಕರಾಗಿರುತ್ತಾರೆ. ಆದರೆ ಒಬ್ಬ ಭಯಭಕ್ತಿಯುಳ್ಳ ಸತ್ಯವೇದ ವಿದ್ಯಾರ್ಥಿಗೆ ದೇವರು ಮಾತ್ರವೇ ಜೀವದ ಬುಗ್ಗೆಯ ಪ್ರಪ್ರಥಮ ಕಾರಣನಾಗಿದ್ದಾನೆ ಎಂಬ ದೇವರ ವಾಕ್ಯದ ಹೇಳಿಕೆಯನ್ನು ಒಪ್ಪಿಕೊಳ್ಳುವುದರಲ್ಲಿ ಕಿಂಚಿತ್ತಾದರೂ ತೊಂದರೆ ಯಾಗುವುದಿಲ್ಲ. ಆತನಿಂದಲೇ ಎಲ್ಲಾ ಜೀವಿಗಳೂ ಪ್ರತಿ ಸಮಕ್ಷೇತ್ರಗಳಿಗೂ ಸಾಗುತ್ತಾ ಬಂದಿವೆ; ಅಪೋಸ್ತಲನು ಹೇಳುವಂತೆ **"ಸಮಸ್ತಕ್ಕೂ ಮೂಲ ಕಾರಣನು ತಂದೆಯಾದಾತನು . . . . . ನಮಗೆ ಒಬ್ಬನೇ ಕರ್ತ ಆತನ ಮೂಲಕವಾಗಿ ಸಮಸ್ತವೂ ಉಂಟಾಯಿತು"** (1 ಕೊರಿಂಥ 8:6). ಒಬ್ಬ ಕ್ರೈಸ್ತನು ಸೃಷ್ಟಿಕರ್ತನ ಸಾಕ್ಷ್ಯವನ್ನು ಪ್ರಕೃತಿಯೆಂಬ ಪುಸ್ತಕದಲ್ಲಿ ನೋಡುವುದು ಮಾತ್ರವಲ್ಲ ಆತನು ಸತ್ಯವೇದದಲ್ಲಿ ಒಬ್ಬ ಸೃಷ್ಟಿಕರ್ತನ ನಿರ್ದಿಷ್ಟವಾದ ಪ್ರಕಟನೆಯನ್ನು ಕಂಡುಕೊಳ್ಳುತ್ತಾನೆ. ಆತನು ಸತ್ಯವಾಗಿ ದೇವರು ನಮ್ಮ ಪ್ರಥಮ ತಂದೆತಾಯಿಗಳನ್ನು ಸೃಷ್ಟಿಸಿದನು, ಅವರಿಗೆ ಜೀವವನ್ನು ದಯಪಾಲಿಸಲಾಯಿತು, ಮತ್ತು ಅವರಿಗೆ ತಮ್ಮ ಚೇತನಾಯುಕ್ತ ಜೀವಿಗಳುಳ್ಳ, ಆತ್ಮವುಳ್ಳ, ಅವರಂತೇ ಇರುವ ಸಂತಾನವನ್ನು ವೃದ್ಧಿಗೊಳಿಸುವ ಅವಕಾಶವನ್ನು ಒದಗಿಸಲಾಯಿತು

ಎಂಬುದನ್ನು ಒಪ್ಪಿಕೊಳ್ಳುತ್ತಾನೆ. ಅದೇ ರೀತಿಯಾದ ಪ್ರಕ್ರಿಯೆಯನ್ನು ಆತನು ಮೃಗಗಳಿಗೂ ಒದಗಿಸಿಕೊಟ್ಟಿದ್ದಾನೆ.

ನಾವು ಏದೇನ್ ತೋಟದ ಕಡೆಗೆ ಹಿಂತಿರುಗಿ ನೋಡುವಾಗ ಆದಾಮ ಹವ್ವರನ್ನು ಅವರ ಸರ್ವ ಸಂಪೂರ್ಣತೆಯಲ್ಲಿ ತಮ್ಮ ಸೃಷ್ಟಿಕರ್ತನಂತೆ ನೈತಿಕ ಹಾಗೂ ಬೌದ್ಧಿಕ ಶಕ್ತಿಗಳನ್ನು ಹೊಂದಿದವರಾಗಿದ್ದರು. ಹೀಗಾಗಿ ಅವರು ತಮ್ಮ ಅಧೀನಕ್ಕೆ ನೀಡಲ್ಪಟ್ಟ ಮೃಗಗಳಿಗಿಂತ ಎಷ್ಟೋ ಶ್ರೇಷ್ಠರಾಗಿದ್ದರು ಎಂಬುದನ್ನು ಕಂಡುಕೊಳ್ಳುತ್ತೇವೆ. ಅವರು ಉತ್ತಮ ವರ್ಗದ ಆತ್ಮವನ್ನು ಪಡೆದಿದ್ದುರ ಫಲವಾಗಿ ಅವರಿಗೆ ಉತ್ತಮ ಮಟ್ಟದ ಶರೀರ ರಚನೆಯೂ ಇತ್ತು. ನಾವೀಗ ಮಾನವ ಸೃಷ್ಟಿಯಲ್ಲಿ ದೇವರ ಉದ್ದೇಶವೇನಾಗಿತ್ತು? ಎಂದು ವಿಚಾರಿಸುತ್ತೇವೆ. ಮೃಗಗಳ ಸೃಷ್ಟಿಯನ್ನು ತೆಗೆದುಕೊಂಡರೆ ಅವುಗಳು ಅಲ್ಪಕಾಲ ಮಾತ್ರವೇ ಜೀವಿಸಬೇಕು ನಂತರ ಮರಣವನ್ನಪ್ಪಬೇಕು, ಬೇರೆ ಜಾತಿಯ ಜೀವಿಗಳಿಗೆ ಅನುವು ಮಾಡಿಕೊಡಬೇಕು ಮತ್ತು ಈ ರೀತಿಯಲ್ಲಿ ಅವುಗಳು ತಮ್ಮ ಒಡೆಯರಾದ ಮನುಷ್ಯರ ಸಂತೋಷ ಮತ್ತು ಅನುಕೂಲಗಳನ್ನು ಒದಗಿಸುವ ಸೇವಕರಂತಿರಬೇಕು ಎಂಬಂತೆ ಅವುಗಳನ್ನು ವಿನ್ಯಾಸಗೊಳಿಸಿದ್ದಾನೆ. ಆತನು ಅವುಗಳ ಸರ್ವಸಂಪೂರ್ಣನಾದ ಒಡೆಯನಾಗಿದ್ದಾನೆ. ಆದರೆ ಮಾನವನ ಬಗ್ಗೆ ಏನು ? ಮಾನವರೂ ಸಹಾ ಮೃಗಗಳಂತೆ ಸಾಯುವುದಕ್ಕಾಗಿ ಸೃಷ್ಟಿಸಲ್ಪಟ್ಟಿದ್ದಾರೆಯೋ? ಆತನಿಗೆ ಯಾವುದೇ ಸಾವಿಲ್ಲದ ಗುಣಲಕ್ಷಣಗಳು ದಯ ಪಾಲಿಸಲ್ಪಟ್ಟಿರಲಿಲ್ಲ ಎಂಬುದನ್ನು ನಾವು ಈಗ ತಾನೇ ನೋಡಿದ್ದೇವೆ. ಆದರೆ, ಯಾರು ಆತನ ಅಂಗೀಕೃತ ಷರತ್ತುಗಳಿಗೆ ವಿಧೇಯರಾಗುತ್ತಾರೋ ಅಂಥವರಿಗೆ ನಿತ್ಯಜೀವದ ಒದಗುವಿಕೆ ಇರುವ ದೇವರ ಅನೇಕ ಸಾಕ್ಷ್ಯಗಳನ್ನು ನಾವು ಕಂಡುಕೊಂಡಿದ್ದೇವೆ; ಆ ಒದಗಿಸುವಿಕೆಗಳು ಅಮರತ್ವದ ಶಕ್ತಿ ಮತ್ತು ಗುಣಲಕ್ಷಣಗಳ ದಯಪಾಲಿಸುವಿಕೆಯಲ್ಲಿ ಕಂಡುಬರುವುದಿಲ್ಲ, ಆದರೆ ಅವುಗಳು ಆತನ ಸೃಷ್ಟಿಕರ್ತನ ಸುಚಿತ್ತ ಮತ್ತು ಸದುದ್ದೇಶಗಳಲ್ಲಿ ಕಂಡುಬರುತ್ತವೆ. ಇದರಡಿಯಲ್ಲೇ "ಆತನು ಜೀವಿಸುತ್ತಾನೆ, ಚಲಿಸುತ್ತಾನೆ ಮತ್ತು ಆತನ ಇರುವಿಕೆ ಅಡಗಿದೆ".

ಪ್ರಾಸಂಗಿಕವಾಗಿ, ಆಳವಿಲ್ಲದ ಸಂಕುಚಿತ ಮನೋಭಾವದ ಚಿಂತಕನು ಮಾನವನು ಅಮರ, ಅವಿನಾಶಿ ಎಂದು ವಾದಿಸುತ್ತಾನೆ. ಯಾಕೆಂದರೆ ವಿಜ್ಞಾನವು ನಿರ್ಧರಿಸಿರುವ ಪ್ರಕಾರ, ಯಾವುದೊಂದು ವಸ್ತುವೂ ನಾಶವಾಗುವುದಲ್ಲ. ಆದರೆ, ಈಗಾಗಲೇ ನಾವು ಗಮನಿಸಿದಂತೆ 'ವಸ್ತುವು ಮಾನವನಲ್ಲ ಅಥವಾ ಆತ್ಮವಲ್ಲ ಅಥವಾ ಜೀವಿಸುವ ವ್ಯಕ್ತಿಯಲ್ಲ. ದೇಹವು ಒಂದು ವಸ್ತುವಾಗಿದೆ. ಆದರೆ ಅದು ಮಾನವನ ದೇಹವಾಗಬೇಕಾದರೆ ಆ ವಸ್ತುವು ವಿಶೇಷವಾದ, ವಿಶಿಷ್ಟವಾದ ಸುವ್ಯವಸ್ಥೆ ಹೊಂದಿರಬೇಕು. ನಂತರದಲ್ಲಿ ಅದು ಮಾನವ ಅಥವಾ ಆತ್ಮವಾಗುವಂತೆ ಜೀವಾತ್ಮವು ಅದಕ್ಕೆ ಕೂಡಿಕೊಳ್ಳಬೇಕು. ಶರೀರರಚನೆಯು ನಾಶವಾಗುವುದಿಲ್ಲ ಎಂಬುದಾಗಿ ಯಾರೂ ವಾದವಾಡುವುದಿಲ್ಲ. ಆದುದರಿಂದ ಜೀವಿಸುವ ವ್ಯಕ್ತಿ ಅಥವಾ ಆತ್ಮವು ಶರೀರರಚನೆಯ ಮೇಲೆ ಆತುಕೊಳ್ಳುವಾಗ ಅದನ್ನು ನಾಶಪಡಿಸಬಹುದಾಗಿದೆ ಎಂಬುದನ್ನು ವಿವೇಚನಾ ಸಾಮರ್ಥ್ಯವುಳ್ಳ ಯಾರಾದರೂ ಕಂಡುಕೊಳ್ಳಬಹುದಾಗಿದೆ. ಇದರೊಂದಿಗೆ, ಈ ಅಸಂಬದ್ಧವಾದ ವಿವೇಚನೆಯು ಅಥವಾ ವಿವೇಚಿಸುವುದರಲ್ಲಿ ವಿಫಲವಾಗಿರುವುದು ಎಲ್ಲಾ ಕ್ರಿಮಿಗಳೂ ಮತ್ತು ಹರಿದಾಡುವ ಜೀವಿಗಳಿಗೂ ನಿರ್ಲಯತ್ವವುಂಟೆಂಬ ಮತ್ತು ಅವುಗಳು ಸಹಾ ನಾಶವಿಲ್ಲದ್ದು ಎಂಬ ಒಂದು ಸಾದೃಶ್ಯವಾದ ಕೇಳಿಕೆಗೆ ಎಡೆಮಾಡಿಕೊಡುತ್ತದೆ. ನಾಶಪಡಿಸಬಹುದಾದ ಜಡವಾದ ವಸ್ತುವಿಗೂ ಮತ್ತು ನಾಶಪಡಿಸುವ ಜೀವಿಗೂ ಆಗಾಧವಾದ ವ್ಯತ್ಯಾಸವಿದೆ.

ದಾಖಲೆಗಳ ಪ್ರಕಾರ, ದೇವರು ನಮ್ಮ ತಂದೆಯಾದ ಆದಾಮನಿಗೆ ಆತನ ಜೀವವು ಭದ್ರವಾಗಿದೆಯೆಂದೂ ಮತ್ತು ಆತನು ದೇವರ ವಿಧೇಯ ಮಗನಾಗಿರುವವರೆಗೂ ಜೀವಿಸುವನೆಂದು ಹೇಳಿದ್ದಾನೆ; ಆದರೆ ಅವಿಧೇಯತೆ ಮಾತ್ರವೇ ಆತನನ್ನು (ಆತನ ಜೀವ ಅಥವಾ ಆತ್ಮನನ್ನು) ಮರಣಕ್ಕೆ ತೆರೆದಿಡುತ್ತದೆ. ಅದೇ ಪರಿಶುದ್ಧ ಗ್ರಂಥವು ನಮ್ಮ ಆದಿ ತಂದೆತಾಯಿಗಳ ಅವಿಧೇಯತೆಯ ಬಗ್ಗೆ, ಮತ್ತು ಆ ಕಾರಣ ದೇವರು ಅವರಿಗೆ ನೀಡಿದ ಮರಣ ಶಾಪದ ಬಗ್ಗೆ ಹೇಳುತ್ತದೆ. ನಾವಿಲ್ಲಿ ದೇವರ ಈ ಶಾಪದ ಮಾತುಗಳ ಧಾಟಿಯನ್ನು ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ. ದೇವರು ತನ್ನ ಮಾತುಗಳನ್ನು ಜೀವಾತ್ಮಗಳನ್ನು ಸಚೇತನಗೊಳಿಸುವ ಮುನ್ನ ಇದ್ದ ಪ್ರಜ್ಞಾಹೀನ ದೇಹಕ್ಕೆ ಹೇಳಲಿಲ್ಲ; ಅಥವಾ ದೇವರು ತನಗೆ ತಾನೇ ಜೀವ ಉಸಿರು ಅಥವಾ ಜೀವಾತ್ಮಕ್ಕೂ ಇದನ್ನು ಹೇಳಲಿಲ್ಲ. ಅದು ಕೇವಲ ಜೀವತುಂಬುವ ವಿವೇಕಾಹೀನವಾದ ಶಕ್ತಿಯಾಗಿತ್ತು. ಆತನು ಆದಾಮನಿಗೆ, ಆತ್ಮಕ್ಕೆ, ವಿವೇಕವುಳ್ಳ ಅಥವಾ ಚೇತನಾಯುಕ್ತವಾದ ಜೀವಿಗೆ ಅವುಗಳನ್ನು ಸಂಪೂರ್ಣವಾಗಿ ಸೃಷ್ಟಿಸಿದ ನಂತರದಲ್ಲಿ ಸಂಬೋಧಿಸಿ ಇದನ್ನು ಹೇಳಿದನು. ಆತ್ಮ ಅಥವಾ ಜೀವವುಳ್ಳ ವ್ಯಕ್ತಿಯನ್ನು ಸಂಬೋಧಿಸುವುದು ಇದು ಸಮಂಜಸವಾಗಿದೆ ಮತ್ತು ಸರಿಯಾದ ಏಕೈಕ ಕ್ರಮವಾಗಿದೆ ಎಂಬುದನ್ನು ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ. ಯಾಕೆಂದರೆ, ಆತ್ಮ ಅಥವಾ ಜೀವಿಸುವ ವ್ಯಕ್ತಿಯನ್ನು ಮಾತ್ರವೇ ಸಂಬೋಧಿಸಬೇಕಾಗುತ್ತದೆ. ಈಗ ದೇವರ ಮಾತುಗಳನ್ನು ಗುರುತಿಸಿರಿ – **"ನೀನು** ಈ ಹಣ್ಣನ್ನು ತಿಂದ ದಿನ, ನಿಜವಾಗಿಯೂ **ನೀನು** ಸತ್ತೇಹೋಗುವಿ**"** – ಆದಿ. 2:17.

ಆದಾಮನು ದೇವರ ನಿಯಮವನ್ನು ಉಲ್ಲಂಘಿಸಿದಾಗ, ಮತ್ತು ಆ ಮೂಲಕ ದೇವರ ದಂಡನೆಗೆ ಒಳಗಾದಾಗ, ಆತನ ಆತ್ಮವು ಮರಣವನ್ನಪ್ಪುತ್ತದೆ. ದೇವರು ತನ್ನ ಈ ದಂಡನೆಯನ್ನು ತತ್ಕ್ಷಣದ ಸಾವು ಎಂಬುದಾಗಿ ವಿಧಿಸಿದ್ದಿರಬಹುದು; ಆದರೆ ಅದರ ಬದಲಾಗಿ ಕೇವಲ ಆತನು ಆದಾಮನಿಗೆ ನೀಡಿದ್ದ ನಿರಂತರವಾದ ಜೀವಿತವನ್ನು ಹಿಂದಕ್ಕೆ ಪಡೆದು ಆದಾಮನು ಕ್ರಮೇಣವಾಗಿ ಸಾಯುವಂತೆ ಮಾಡಿದನು. ಜೀವನದ ಗತಿಯನ್ನು ನಮಗೆ ಜೀವದಾಯಕ ವೃಕ್ಷಗಳ ವಿಶೇಷವಾದ ತೋಪಿನಲ್ಲಿರುವುದೆಂದು ವರ್ಣಿಸಲಾಗಿದೆ. ಅದರ ಫಲವನ್ನು ತಿಂದಿದ್ದರೆ ಮಾನವನು ಜೀವಿಸುವುದನ್ನು ಮುಂದುವರೆಸಬಹುದಿತ್ತು. ಆತನಿಗೆ ದಿನನಿತ್ಯ ವ್ಯರ್ಥ್ಯ ವಿಸರ್ಜನೆಯುಂಟಾಗಿ ಯಾವುದೇ ಹಾಳಾಗುವುದಾಗಲೀ ಉಂಟಾಗುತ್ತಿರಲಿಲ್ಲ. ಮಾನವನು ಅಪರಾಧಿಯಾದ ಕೂಡಲೇ ಆತನು ಆ ಜೀವದಾಯಕ ವೃಕ್ಷ ಅಥವಾ ಅದರ ಹಣ್ಣಿನ ತೋಟದ ಬಳಿಗೆ ಹೋಗುವುದನ್ನು ತಡೆಹಿಡಿಯಲಾಯಿತು. ಈ ರೀತಿಯಲ್ಲಿ ಆತನ ಆಡಳಿತದಲ್ಲಿದ್ದ ಕೀಳು ಪ್ರಾಣಿಗಳಂತೆ ಆತನೂ ಸಹಾ ಮರಣದ ವಶವಾದನು. ಮಾನವನ ಪ್ರಕರಣದಲ್ಲಿ, ಹೇಗೂ ಮರಣವನ್ನು 'ಶಾಪ' ಎಂದು ಹೇಳಲಾಗಿದೆ. ಯಾಕೆಂದರೆ ಇದು ದೇವರ ನಿಯಮವನ್ನು ಉಲ್ಲಂಘಿಸಿದ್ದರಿಂದ ಬಂದುದಾಗಿದೆ ಮತ್ತು ಸಂಭವನೀಯವಾಗಿ ಈ ಲೋಕದ ಅರಸನ ಮೇಲೆ ಮತ್ತು ಆತನ ಪ್ರಜೆಗಳೆಲ್ಲರ ಮೇಲೆ, ಕೆಳವರ್ಗದ ಪ್ರಾಣಿಗಳ ಮೇಲೆ ಎರಗಿಬಂದ ಶಾಪದ ಫಲವಾಗಿ. ಅರಸನು ತನ್ನ ಸಮರ್ಪಕತೆಯನ್ನು ಕಳಕೊಂಡವನಾದುದರಿಂದ ಆತನ ಸಮಗ್ರ ಸಾಮ್ರಾಜ್ಯದಲ್ಲಿ ಅವ್ಯವಸ್ಥೆಯು ಉಂಟಾಯಿತು.

ಇದಕ್ಕೂ ಹೆಚ್ಚಾಗಿ ಆದಾಮನ ಮಕ್ಕಳು ಪೂರ್ವಜನಕನಾದ ಆತನಿಂದ ಮುಟ್ಟುಗೋಲಾದ ಮತ್ತು ಆತನು ಕಳಕೊಳ್ಳುತ್ತಿದ್ದ ಯಾವುದೇ ಹಕ್ಕು ಅಥವಾ ಸೌಕರ್ಯ ಅಥವಾ ದೈಹಿಕ ಸಮರ್ಪಕತೆಯನ್ನು ಹೊಂದಿಕೊಳ್ಳಲಾಗಲಿಲ್ಲ; ಆದುದರಿಂದ ದೇವರ ವಾಕ್ಯವು ತೋರಿಸಿಕೊಡುವಂತೆ, ಆದಾಮನ ಸಮಸ್ತ ಸಂತಾನವು ಆತನೊಂದಿಗೆ ಶಾಪಕ್ಕೆ – ಅಂದರೆ ಮರಣಕ್ಕೆ ಒಳಗಾದರು. ಆದುದರಿಂದ ದೇವರ ಸ್ವಾರೂಪ್ಯದಲ್ಲಿ ಸೃಷ್ಟಿಮಾಡಲ್ಪಟ್ಟ, ಅದ್ಭುತವಾದ ಜ್ಞಾನಶಕ್ತಿಯನ್ನು ಹೊಂದಿದ್ದ ನಿತ್ಯಜೀವದ ಗೌರವಕ್ಕೆ ಪಾತ್ರರಾಗಿದ್ದ ನಾವು ಅಂತ್ಯವಿಲ್ಲದ ಜ್ಞಾನ. ಅಂತ್ಯವಿಲ್ಲದ ಪ್ರೀತಿ, ಅಂತ್ಯವಿಲ್ಲದ ನ್ಯಾಯ, ಅಂತ್ಯವಿಲ್ಲದ ಶಕ್ತಿ ಇವುಗಳು ಒಟ್ಟಾಗಿ ಮಾನವರ ರಕ್ಷಣಾ ಯೋಜನೆಯೊಂದನ್ನು ಉತ್ಪಾದಿಸುವುದು ಸಾಧ್ಯವೆ? ಮತ್ತು ಅದರಡಿಯಲ್ಲಿ ದೇವರು ನ್ಯಾಯವಂತನು ಆದರೂ ಯೇಸುಕ್ರಿಸ್ತನನ್ನು ನಂಬುವವರನ್ನು ನಿರ್ದೋಷಿಗಳನ್ನಾಗಿ ಮಾಡಲು ಸಾಧ್ಯವೇ? ಎಂಬುದಾಗಿ ನಾವು ಆತನ ಕಡೆಗೆ ನೋಡುವವರಾಗಿದ್ದೇವೆ – ರೋಮಾ. 3:26.

ನಿರೀಕ್ಷೆಯು ವ್ಯರ್ಥವಾದುದಲ್ಲ. ಕ್ರಿಸ್ತನ ಮೂಲಕ ದೇವರ ಒದಗಿಸುವಿಕೆಯು ದೇವರವಾಕ್ಯದಲ್ಲಿ ಪ್ರಕಟಿಸಿರುವಂತೆ ಸತ್ತವರ ಪುನರುತ್ಥಾನವಾಗಿದೆ, ಅಂದರೆ, ಮಾನವರನ್ನು ಪೂರ್ವ ಸ್ಥಿತಿಗೆ ಪುನಃಸ್ಥಾಪಿಸುವುದು. ನಿಜವಾಗಿಯೂ ಇದಕ್ಕೆ ಮಿತಿಯೂ, ಷರತ್ತುಗಳೂ ಅವೆ. ಎಲ್ಲರೂ ದೇವರ ಸೌಭಾಗ್ಯಕ್ಕೆ ಹಿಂತಿರುಗಿ ಹೋಗಲಾರರು. ಆದರೆ ಹಿಂತಿರುಗುವ ಅವಕಾಶಗಳನ್ನು ಎಲ್ಲರಿಗೂ ದಯಪಾಲಿಸಲಾಗುವುದು. ಬಲವಾದ ಸಂಭವನೀಯತೆಯಲ್ಲಿ ನಾವು ಆದಾಮನ ಸಂತಾನದಲ್ಲಿ ಹೆಚ್ಚಿನವರು ಸತ್ಯವನ್ನು ತಿಳುಕೊಂಡಾಗ ಕ್ರಿಸ್ತನ ಮೂಲಕವಾದ ದೇವರ ಕೃಪೆಯನ್ನು ಅಂಗೀಕರಿಸಿಕೊಳ್ಳುತ್ತಾರೆ ಮತ್ತು ತಮ್ಮ ಜೀವಿತವನ್ನು ವಿಮೋಚಕನ ಮೇಲಿನ ವಿಶ್ವಾಸದ ಮೂಲಕ ನೂತನ ಒಡಂಬಡಿಕೆಯಲ್ಲಿ ದೃಢಪಡಿಸಿಕೊಳ್ಳುತ್ತಾರೆ ಎಂದು ನಂಬುತ್ತೇವೆ.

ನಮ್ಮ ಕರ್ತನು ಉತ್ತರಿಸಲು ನಿರಾಕರಿಸಿದ್ದ ಪ್ರಶ್ನೆಗೆ ಅಂದರೆ **"ರಕ್ಷಣೆ ಹೊಂದುವವರು ಸ್ವಲ್ಪಜನರೋ?"** (ಲೂಕ 13:23) ಎಂಬುದಕ್ಕೆ ಉತ್ತರಿಸುವುದು ನಮ್ಮದಲ್ಲ. ನಾವು ಹೆಚ್ಚೆಂದರೆ "ಎಲ್ಲರಿಗಾಗಿ ಈಡುಬಲಿ"ಯು ನಮ್ಮ ಕರ್ತನಿಂದ ನೀಡಲ್ಪಟ್ಟಿದೆ ಮತ್ತು ಅದರಲ್ಲಿನ ವಾಗ್ದಾನವೇನೆಂದರೆ ಸೂಕ್ತಸಮಯದಲ್ಲಿ ಎಲ್ಲರೂ ಈ ಸತ್ಯದ ಜ್ಞಾನಕ್ಕೆ ಬರುವರು ಮತ್ತು ಆತನಿಂದ ನಿತ್ಯಜೀವವನ್ನು ಹೊಂದಿಕೊಳ್ಳುವ ಅವಕಾಶವಿರುವುದು ಎಂಬುದನ್ನು ಸೂಚಿಸಬಹುದು (1 ತಿಮೋ. 2:4–6 ನೋಡಿರಿ) ಆತನು ಮಹಾ ಬೆಳಕಾಗಿದ್ದು **"ಆ ಬೆಳಕೇ ಪ್ರತಿ ಮನುಷ್ಯನಿಗೂ ಬೆಳಕನ್ನು ಕೊಡುವಂಥದು"** (ಯೋಹಾನ 1:9). ನಾವು ಈ ಕಾಲದಲ್ಲಿ 'ಕೇಳಲು ಕಿವಿಯುಳ್ಳ' ಎಲ್ಲರಿಗೂ ಕರ್ತನ ಈ ಮಾತುಗಳನ್ನು ಪುನಃ ಪುನಃ ಹೇಳಬೇಕು – **"ಇಕ್ಕಟ್ಟಾದ ಬಾಗಲಿನಿಂದ ಒಳಕ್ಕೆ ಹೋಗುವುದಕ್ಕೆ ಹೆಣಗಾಡಿರಿ. ಬಹು ಜನ ಒಳಕ್ಕೆ ಹೋಗುವುದಕ್ಕೆ ನೋಡುವರು, ಆದರೆ ಅವರಿಂದಾಗುವುದಿಲ್ಲ ಎಂದು ನಿಮಗೆ ಹೇಳುತ್ತೇನೆ. ಮನೆ ಯಜಮಾನನು ಎದ್ದು ಕದಾಹಾಕಿಕೊಂಡ ಮೇಲೆ ನೀವು ಹೊರಗೆ ನಿಂತುಕೊಂಡು ಕದ ತಟ್ಟಿ – ಸ್ವಾಮೀ ನಮಗೆ ತೆರೆಯಿರಿ ಎಂದು ಹೇಳುವುದಕ್ಕೆ ತೊಡಗುವಾಗ ಅವನು – ನೀವು ಎಲ್ಲಿಯವರೋ? ನಿಮ್ಮ ಗುರುತು ನನಗಿಲ್ಲ ಅಂದಾನು"** (ಲೂಕ 13:24,25). ಮತ್ತೊಂದು ಮಾತುಗಳಲ್ಲಿ ಕರೆ, ಈ ಸುವಾರ್ತಾ ಯುಗದ ಏಕೈಕ ಕರೆಯೆಂದರೆ ಸ್ವಯಂ ಅರ್ಪಣೆಯ ಇಕ್ಕಟ್ಟಾದ ದಾರಿ. ಆಸಕ್ತಿಯ ಯಾವುದೇ ಚಿತ್ತಭ್ರಮಣೆಯು ಈಗ ನಮಗಾಗಿ ಕೊಡುಗೆಯಾಗಿರುವ ಅಮರತ್ವದ ಬಹುಮಾನವನ್ನು ಗೆಲ್ಲುವ ಓಟದಲ್ಲಿ ನಮ್ಮನ್ನು ನಿಧಾನಗೊಳಿಸ ಕೂಡದು. ಆಯ್ಕೆಗೊಂಡವರ ಸಂಖ್ಯೆಯು ಭರ್ತಿಯಾದಾಗ ಮತ್ತು ಈ ಯುಗದ ಅಂತ್ಯದಲ್ಲಿ ಮಹಾ ಸಂಕಟವು ಉಂಟಾಗಿ ಸಭೆಯೂ ಪೂರ್ಣಗೊಂಡಿದೆ ಮತ್ತು ಮಹಿಮೆಹೊಂದಿದೆ ಎಂಬ ಸೂಚನೆಯನ್ನು

ನೀಡುತ್ತದೆ. ಈ ಲೋಕದ ಕ್ಷುಲ್ಲಕ ಸಂಗತಿಗಳ ಬಗ್ಗೆ ವಿವಿಧ ದೃಷ್ಟಿಕೋನಗಳನ್ನು ನೀಡುವ ಅನೇಕರಿದ್ದಾರೆ ಅದು ಅವರ ಪ್ರತಿಷ್ಠೆಯ ಹೊಣೆಗೆ ತಡೆಯೊಡ್ಡುವವುಗಳಾಗಿವೆ.

ಆದಾಮನ ಸಾಮಾನ್ಯ ಸಂತತಿಯವರ ರಕ್ಷಣೆಯ ಬಗ್ಗೆ ದೇವರ ಯೋಜನೆಯೆಂದರೆ, ಅದರ ಪ್ರತಿಯೊಬ್ಬ ಸದಸ್ಯನಿಗೂ ಮಿಲಿಯಾಂತರ ಯುಗದಲ್ಲಿ ಕರ್ತನ ಅಮೂಲ್ಯ ರಕ್ತದಿಂದ ಮುದ್ರಿತವಾಗಿರುವ ನೂತನ ಒಡಂಬಡಿಕೆಯ ಷರತ್ತಿಗನುಸಾರವಾಗಿ ನಿತ್ಯಜೀವದ ಕೊಡುಗೆಯನ್ನು ನೀಡುವುದು. ಆದರೆ ಅದರಲ್ಲಿ ಎಲ್ಲಿಯೂ ನಿರ್ಲಯತ್ವವು, ದೇವರ ಸ್ವಭಾವವು ಸುವಾರ್ತಾ ಯುಗದ ಆಯ್ಕೆಗೊಂಡ ಸಭೆಯಾದ ಚಿಕ್ಕ ಹಿಂಡಿನ, ಮದಲಗಿತ್ತಿ ಅಥವಾ ಕುರಿಮರಿಯ ವಧುವಿನ ಹೊರತಾಗಿ ಬೇರೆ ಯಾರಿಗಾದರೂ ದಯಪಾಲಿಸಲ್ಪಡುತ್ತದೆ ಎಂಬ ಪ್ರಸ್ತಾಪವಿಲ್ಲ. ಆದಾಮನ ಇತರೆ ಸಂತತಿಯವರಿಗಿರುವ ಕೊಡುಗೆಯೆಂದರೆ ಜೀವ ಮತ್ತು ಆರೋಗ್ಯವನ್ನು 'ಪುನಃವಶ ಮಾಡಿಕೊಳ್ಳುವುದು' ಮತ್ತು ಮಾನವ ಸ್ವಭಾವವನ್ನು ದೇವರ ಸ್ವರೂಪದಲ್ಲಿ ಉಂಟುಮಾಡಲ್ಪಟ್ಟ ಆದಾಮನು ಪಾಪಮಾಡಿ ಮರಣ ಶಾಪಕ್ಕೆ ತುತ್ತಾಗುವ ಮುನ್ನ ಹೊಂದಿದ್ದ ಸಮರ್ಪಕತೆಯನ್ನು ಅಂದರೆ ಜೀವ, ಆರೋಗ್ಯ ಮತ್ತು ಸಮರ್ಪಕತೆಗಳನ್ನು ಪುನಃ ವಶಪಡಿಸಿಕೊಳ್ಳುವುದು. (ಅ.ಕೃ 3: 19–21 ನೋಡಿರಿ). ಮಿಲಿಯಾಂತರ ಯುಗದ ಅಂತ್ಯದಲ್ಲಿ ಮಾನವ ಜೀವಿಗಳಲ್ಲಿನ ಎಲ್ಲಾ ವಿಧೇಯರೂ ಆದಾಮನಲ್ಲಿ ಕಳಕೊಂಡಿದ್ದವುಗಳೆಲ್ಲವನ್ನೂ ಕ್ರಿಸ್ತನ ವಿಮೋಚನೆಯಲ್ಲಿ ಪುನಃ ಪಡಕೊಳ್ಳುವಾಗ ಎಲ್ಲರೂ ಸಂಪೂರ್ಣವಾದ ಜ್ಞಾನ ಮತ್ತು ಅನುಭವಗಳನ್ನು ಧರಿಸಿಕೊಂಡವರಾಗಿದ್ದು ಆ ಕಾರಣದಿಂದ ಪರೀಕ್ಷೆಯನ್ನು ಎದುರಿಸಲು ಸಂಪೂರ್ಣ ಸಮರ್ಥರಾಗಿದ್ದು ಆದಾಮನಂತೆ ಕಠೋರವಾದ ಪರೀಕ್ಷೆಗೆ ಒಳಗಾಗುವರು, ಆದರೆ ವ್ಯಕ್ತಿಗತವಾಗಿ (ಪ್ರಕಟನೆ 20:7–10 ನೋಡಿರಿ). ಮತ್ತು ಯಾರು ಪೂರ್ಣವಾದ ಹೃದಯ ಅನುಕಂಪವನ್ನು ಮತ್ತು ದೇವರೊಂದಿಗೆ ಮತ್ತು ಆತನ ನೀತಿಯುಳ್ಳ ವ್ಯವಸ್ಥೆಗಳೊಂದಿಗೆ ಬಾಹ್ಯವಾದ ಸಾಮರಸ್ಯವನ್ನು ಹೊಂದಿದ್ದಾರೋ ಅವರುಗಳು ಮಾತ್ರವೇ ಮಿಲಿಯಾಂತರ ಯುಗವನ್ನು ದಾಟಿ ನಿತ್ಯನಿರಂತರವಾದ ಭವಿಷ್ಯಕ್ಕೆ ಅಥವಾ ಅಂತ್ಯವಿಲ್ಲದ ಲೋಕಕ್ಕೆ (ಯುಗಕ್ಕೆ) ಹೋಗಲು ಅನುಮತಿ ಪಡಕೊಳ್ಳುತ್ತಾರೆ. ಉಳಿದವರೆಲ್ಲರೂ ಎರಡನೆಯ ಮರಣದಲ್ಲಿ ನಾಶಗೊಳ್ಳುತ್ತಾರೆ – **"ತಮ್ಮ ಜನರಿಂದ ಸಂಪೂರ್ಣವಾಗಿ ನಾಶವಾಗುವರು"** – ಅ.ಕೃ. 3:23.

ಇನ್ನು ಮುಂದೆ ಮರಣವೆಂಬುದಾಗಲೀ, ನಿಟ್ಟುಸಿರು ಅಥವಾ ಗೋಳಾಟವಾಗಲೀ ಇಲ್ಲದೇ ಹೋದಾಗ್ಯೂ, ನಿರ್ಲಯತ್ವದ ಜಯಮಾಲೆಯನ್ನು ಧರಿಸುತ್ತಾರೆ ಎಂಬ ಅರ್ಥವಲ್ಲ. ಮಿಲಿಯಾಂತರ ಯುಗದ ವಿಜಯಿಗಳ ಸಲುವಾಗಿ ಅಲ್ಲ, ಆದರೆ ಸರಿ ಮತ್ತು ತಪ್ಪುಗಳನ್ನು ಹಾಗೂ ಅದರ ಪರಿಣಾಮಗಳನ್ನು ನಿರ್ಣಯಿಸುವುದನ್ನು ಕಲಿತುಕೊಳ್ಳುವುದರ ಮೂಲಕ ಅವರುಗಳು ದೇವರ ಸಂಪೂರ್ಣ ಚಿತ್ತಾನುಸಾರವಾದ ನೀತಿಯುಳ್ಳ ಗುಣಲಕ್ಷಣಗಳನ್ನು ರೂಪಿಸಿಕೊಂಡವರಾಗಿ, ಪರೀಕ್ಷೆಗಳನ್ನು ಎದುರಿಸಿರುವ ಪ್ರಯುಕ್ತ ಆ ಮೂಲಕ ಅವರುಗಳಿಗೆ ಮಾರ್ಗವು ತೆರೆದಿದ್ದರೂ ಮತ್ತು ಯಾವುದೇ ದಂಡನೆ ಇಲ್ಲದೇ ಇದ್ದರೂ ಅವರುಗಳು ಪಾಪ ಮಾಡುವುದಿಲ್ಲವೆಂದು ನಿರೂಪಿಸುತ್ತಾರೆ. ಅವರುಗಳಲ್ಲಿಯೇ ಸ್ವತಃ ಜೀವವಿರುವುದಿಲ್ಲ, ಅವರು ಜೀವದಿಂದ ಉಳಿಯಲು ದೇವರಿಂದ ಆಹಾರ ಮುಂತಾದ ಒದಗಿಸುವಿಕೆಗಳ ಮೇಲೆ ಆತುಕೊಂಡಿರುತ್ತಾರೆ – ಪ್ರಕಟನೆ 21:4,6,8 ; 7:16; ಮತ್ತಾಯ 5:6.

ದೇವರ ಶಾಪವು ಮರಣವನ್ನು ತಂದಿರುವಾಗ, ಈ ಶಾಪ ವಿಮೋಚನೆಯೆಂದರೆ ಮಾನವನು ಮೂಲದಲ್ಲಿ ಏದೇನ್ ತೋಟದಲ್ಲಿದ್ದಾಗ ಹೊಂದಿಕೊಂಡಿದ್ದ ಆಶೀರ್ವಾದಕ್ಕೆ ಹಿಂತಿರುಗುವಂತೆ ಕಾನೂನುಬದ್ಧವಾದ ಎಲ್ಲಾ ವಿರೋಧಗಳನ್ನು ತೊಡೆದುಹಾಕುವುದು. ಆದರೆ ಮಾನವನು ಈಗ ಪತನಗೊಂಡು, ಮಾನಸಿಕವಾಗಿ, ನೈತಿಕವಾಗಿ ಮತ್ತು ದೈಹಿಕವಾಗಿ ಅಸಮರ್ಪಕನಾಗಿದ್ದು, ಏದೇನ್ ಅಥವ ಪರದೈಸ್ ಪರಿಸ್ಥಿತಿಯ ಸುಖವನ್ನು ಅನುಭವಿಸಲು ಮೊದಲು ಆದಾಮನಿಗಿದ್ದಂತೆ ಅರ್ಹತೆಯುಳ್ಳವನಾಗಿಲ್ಲ; ಆದುದರಿಂದ ದೇವರ ಉದ್ದೇಶ ವೇನೆಂದರೆ, ಮಿಲಿಯಾಂತರ ಯುಗದಲ್ಲಿನ "ಪುನಃ ಸಂಧಾನ"ದ ಸಮಯದಲ್ಲಿ, ಕ್ರಿಸ್ತಯೇಸುವಿನ ಮರಣದ ನಿಮಿತ್ತವಾಗಿ ಪರಿಹಾರಗೊಂಡಿರುವುದರಿಂದ ಅವುಗಳು ಜೀವದಾಯಕನೂ, ವಿಮೋಚಕನೂ ಆದವನ ಮೂಲಕ ಮರಣ ಮತ್ತು ಪಾಪದ ಬಂಧನದಿಂದ ಮುಕ್ತಿಪಡೆದು ಹಿಂದಿರುಗಬಹುದೆಂಬುದು ದೇವರ ಉದ್ದೇಶವಾಗಿದೆ. ಇದು ಮೂಲದಲ್ಲಿನ ದೇವರ ಸ್ವಾರೂಪ್ಯಕ್ಕೆ ತಕ್ಕನಾಗಿರುವುದು. ಇದು ಮಾತ್ರವಲ್ಲ, ದೇವರ ಯೋಜನೆಯಲ್ಲಿ ನಾವು ಕಂಡುಕೊಳ್ಳುವುದೇನೆಂದರೆ, ಪಾಪದೊಂದಿಗಿನ ಮಾನವ ಅನುಭವವು ಒಂದು ಪಾಠವನ್ನು ರಚಿಸಿದ್ದು ಅದು ಕೆಲವರ ಮೇಲೆ ನಿತ್ಯನಿರಂತರವಾದ ಪ್ರಭಾವವನ್ನು ಬೀರುವುದಾಗಿದೆ ಮತ್ತು ಅವರು ತಮ್ಮ ಸ್ವಂತ ಅನುಭಗಳ ಮೂಲಕ "ಪಾಪವು ಕೇವಲ ಪಾಪಸ್ವರೂಪವೇ ಎಂದು ಕಾಣಬಂದು" ಮತ್ತು ಅದರ ಖಚಿತ ಬಹುಮಾನ ಅಥವಾ ದಂಡನೆಯಾದ ಮರಣದ ಬಗ್ಗೆ ಅರಿತುಕೊಳ್ಳುತ್ತಾರೆ; ಆದಕಾರಣ ಮಿಲಿಯಾಂತರ ಯುಗದಲ್ಲಿ ಇವರುಗಳು ನೀತಿವಂತಿಕೆಯ, ಸತ್ಯದ, ಒಳ್ಳೆಯತನದ, ಪ್ರೀತಿಯ ಮತ್ತು ದೇವರ ಗುಣಲಕ್ಷಣದಲ್ಲಿರುವ ಎಲ್ಲಾ ಕೃಪೆ ಮತ್ತು ಸದ್ಗುಣಗಳ ತಿಳುವಳಿಕೆಗೆ ಬರುವರು, ಇಚ್ಚೆಯುಳ್ಳವರು ಮತ್ತು

ವಿಧೇಯರು ನಿತ್ಯಜೀವದ ಸವಲತ್ತುಗಳನ್ನು ತಂದೆಯಾದ ಆದಾಮನಿಗೂ ತಿಳಿಯದ ರೀತಿಯಲ್ಲಿ, ಆತನೂ ಎಂದಿಗೂ ಮೆಚ್ಚಿರದ ರೀತಿಯಲ್ಲಿ ಅರಿತುಕೊಂಡು ಅವುಗಳನ್ನು ಮೆಚ್ಚಿಕೊಳ್ಳುವರು.

ಈ ನಿಮಿತ್ತವಾಗಿ ಮರಣಿಸುವುದು ಜನಾಂಗದಲ್ಲಿ ಸಾಮಾನ್ಯವಾಗಿ ಕ್ರಮೇಣವಾದ ಪ್ರಕ್ರಿಯೆಯಾಗಿರುತ್ತದೆ ಮತ್ತು ಅದೇ ನಿಮಿತ್ತವಾಗಿ ಪುನರುತ್ಥಾನವು ಸಹಾ ಕ್ರಮೇಣವಾದ ಪ್ರಕ್ರಿಯೆಯಾಗುತ್ತದೆ; ಇಂಚು ಇಂಚಾಗಿ, ಮಾನವನು ಮೇಲಕ್ಕೆ, ಮೇಲ ಮೇಲಕ್ಕೆ ಆತನ ತಂದೆಯಾದ ಆದಾಮನು ಬಿದ್ದುಹೋಗಿದ್ದ ಪಾಪದ ಕೆಸರಿನಿಂದ, ಅವನತಿ ಮತ್ತು ಮರಣವೆಂಬ ಭಯಂಕರವಾದ ಗುಂಡಿಯಿಂದ ಸಮರ್ಪಕತೆಯ ಮತ್ತು ಜೀವದ ಭವ್ಯವಾದ ಎತ್ತರಕ್ಕೆ ಎತ್ತಲ್ಪಡುತ್ತಾನೆ. ಲೋಕದ ಈ ಸಾಮಾನ್ಯ ಕಾರ್ಯಕ್ರಮಕ್ಕೆ ಹೊರತಾದದು ಒಂದು ಆದಾವುದೆಂದರೆ, ಸತ್ಯವೇದದಲ್ಲಿ ಪ್ರಸ್ತುತಿಪಡಿಸಿರುವಂತೆ ದೇವರ ಸಾಮರಸ್ಯಕ್ಕೆ ಮುಂದಾಗಿ ತರಲ್ಪಟ್ಟವರು ಅಬ್ರಹಾಮನ ಸಂತತಿ ಸ್ವಾಭಾವಿಕವಾದ ಮತ್ತು ಆತ್ಮೀಕವಾದ ಬಾಧ್ಯಸ್ಥರು – ಗಲಾತ್ಯ 3:29; ಇಬ್ರಿಯ 11:39,40.

ದೇವರ ವಾಕ್ಯದ ಬೆಳಕಿನಲ್ಲಿ ನಾವು ಇದನ್ನು ನೋಡುವಾಗ ನಿರ್ಲಯತ್ವದ ಪ್ರಸ್ತಾಪವು ಉಜ್ವಲವಾಗಿ ಪ್ರಕಾಶಿಸುತ್ತದೆ. ಈ ಸಾಮಾನ್ಯವಾದ "ದೇವರ ವರದಾನವಾಗಿರುವ ನಿತ್ಯಜೀವ"ದ ಸ್ಪಷ್ಟವಾದ ದಾರಿಯನ್ನು ಇರುವ ಕೇವಲ ಆಶೀರ್ವಾದಕರವಾದ ಷರತ್ತುಗಳನ್ನು ಅಂಗೀಕರಿಸುವರೆಂದು ಕಂಡುಬರುವವರೆಲ್ಲರಿಗೆ ವಿಮೋಚಕನು ಬಿಟ್ಟುಕೊಡುತ್ತಾನೆ. ಇದು ಅನರ್ಹರನ್ನು ಸರ್ವರ ಮಹಾ ನ್ಯಾಯಾಧಿಪತಿಯಾದಾತನು ಸದಾ ಪ್ರತಿಪಾದಿಸುವ ನ್ಯಾಯವಾದ ದಂಡನೆಗೆ ಬಿಟ್ಟುಕೊಡುತ್ತದೆ, ಅದೆಂದರೆ :–

**"ಪಾಪವು ಕೊಡುವ ಸಂಬಳ ಮರಣ"** – ರೋಮಾ. 6:23.

**"ಪಾಪ ಮಾಡುವ ಪ್ರಾಣಿಯೇ ಸಾಯುವನು"** – ಯೆಹೆಜ್ಕೇಲ 18:4.

**"ಪಾಪಮಾಡುವವನೇ ಸಾಯುವನು"** – ಯೆಹೆಜ್ಕೇಲ 18:20,

**"ಮಗನಿಗೆ ಒಳಗಾಗದವನು ಜೀವವನ್ನು ಕಾಣುವುದೇ ಇಲ್ಲ; ದೇವರ ಕೋಪವು ಅವನ ಮೇಲೆ ನೆಲೆಗೊಂಡಿರುವುದು"** – ಯೋಹಾನ 4:36.

ಈ ರೀತಿಯಲ್ಲಿ ನಾವು ಈ ಪ್ರಸ್ತಾಪದ ಬಗ್ಗೆಯೂ ಇತರ ಪ್ರಸ್ತಾಪಗಳ ಬಗ್ಗೆ ಇರುವ ಹಾಗೆ ದೇವರ ವಾಕ್ಯಗಳಲ್ಲಿ ಅನ್ಯ ಧರ್ಮೀಯರ ಪದ್ಧತಿಗಳು ಮತ್ತು ವಿಚಾರಣ ಸರಣಿಗಳಿಗಿಂತ ಮಿಗಿಲಾದ ತತ್ವಜ್ಞಾನವು ಹೆಚ್ಚಾಗಿರುವುದನ್ನೂ, ಇನ್ನೂ ಸ್ಪಷ್ಟವಾಗಿರುವುದನ್ನೂ ಮತ್ತು ಮತ್ತಷ್ಟು ತರ್ಕಸಮ್ಮತವಾಗಿರುವುದನ್ನೂ ಕಾಣಬಹುದು. ದೇವರ ಈ ಸತ್ಯ ವಚನಕ್ಕೆ ಮತ್ತು ಅದನ್ನು ದೇವರ ವಿವೇಕ ಮತ್ತು ಶಕ್ತಿಯ ಪ್ರಕಟನೆ ಎಂಬುದಾಗಿ ಅಂಗೀಕರಿಸುವ ಬಗ್ಗೆ ಒಲವು ತೋರುವ ಹೃದಯಗಳಿಗಾಗಿ ಆತನಿಗೆ ಸ್ತೋತ್ರವಾಗಲಿ !

ಆದರೆ "ದೇವರು ಪುನರುತ್ಥಾನದಲ್ಲಿ ಈ ಲೋಕದ ಮಿಲಿಯಾಂತರ ಜನರನ್ನು ಸಂಪೂರ್ಣವಾಗಿ ಪ್ರತಿಯೊಬ್ಬರೂ ತಮ್ಮನ್ನು ಅರಿತುಕೊಳ್ಳುವಂತೆ ಮತ್ತು ಪ್ರಸ್ತುತ ಜೀವನದ ನೆನಪುಗಳಿಂದ ಲಾಭಪಡಕೊಳ್ಳುವಂತೆ ಹೇಗೆ ಪುನಃ ಸೃಷ್ಟಿಸುತ್ತಾನೆ?" ಎಂಬ ಅನುಮಾನದ ಕೂಗುಗಳು ಕೇಳಿಬರುತ್ತವೆ. ನಾವು ಇದಕ್ಕೆ ಕೊಡುವ ಉತ್ತರವೆಂದರೆ ಧ್ವನಿಲೇಖನ ಯಂತ್ರದ ಕೊಳವೆ (Phonograph cylinder) ಯಂತೆ ಮಾನವನು ಸಹಾ ತನ್ನ ಸ್ವಂತ ಮಾತುಗಳನ್ನು ಶೇಖರಿತ ಸುರಕ್ಷಿತವಾಗಿಸಿಕೊಳ್ಳಬಹುದು ಮತ್ತು ಅದನ್ನು ಪುನಃ ಉತ್ಪತ್ತಿಸಬಹುದು; ನಮ್ಮ ಸೃಷ್ಟಿಕರ್ತನು ಇದಕ್ಕಿಂತಲೂ ಮಿಗಿಲಾದ ಅಂಥಾಃ ಮಿದುಳನ್ನು ಸಮಸ್ತ ಜನಾಂಗದವರಿಗಾಗಿ ಪುನಃ ಉತ್ಪಾದಿಸಬಹುದು ಮತ್ತು ಅವು ಪ್ರತಿಯೊಂದು ಭಾವನೆಗಳನ್ನೂ, ಆಲೋಚನೆಗಳನ್ನು, ಅನುಭವಗಳನ್ನೂ ಪುನಃ ಉತ್ಪಾದಿಸಲು ಶಕ್ತವಾಗಿರುತ್ತವೆ. ದಾವೀದನು ಪ್ರವಾದನೀಯವಾಗಿ ಪುನರುತ್ಥಾನವನ್ನು ಅಥವಾ ಮೊದಲ ಜನನವನ್ನು ಪ್ರತಿಬಿಂಬಿಸುವಂತೆ ಹೇಳುವುದೇನೆಂದರೆ :–

"ನೀನು ನನ್ನನ್ನು ಅದ್ಭುತವಾಗಿಯೂ ವಿಚಿತ್ರವಾಗಿಯೂ ರಚಿಸಿದ್ದರಿಂದ ನಿನ್ನನ್ನು ಕೊಂಡಾಡುತ್ತೇನೆ.

**ನಿನ್ನ ಕೃತ್ಯಗಳು ಆಶ್ಚರ್ಯವಾಗಿವೆಯೆಂದು ನನ್ನ ಹೃದಯವು ಚೆನ್ನಾಗಿ ಗ್ರಹಿಸಿಕೊಂಡಿದೆ, ನಾನು ಗುಪ್ತಸ್ಥಳದಲ್ಲಿ ಏರ್ಪಡುತ್ತಾ ಭೂಗರ್ಭದಲ್ಲಿ ರಚಿಸಲ್ಪಡುತ್ತಾ ಇದ್ದಾಗ ನನ್ನ ಅಸ್ಥಿಪಂಜರವು ನಿನಗೆ ಮರೆಯಾಗಿದ್ದಿಲ್ಲ. ನಾನು ಇನ್ನೂ ಕೇವಲ ಪಿಂಡವಾಗಿರುವಾಗ ನಿನ್ನ ಕಣ್ಣುಗಳು ನನ್ನನ್ನು ನೋಡಿದವು; ನನ್ನ ಆಯುಷ್ಕಾಲದ ಪ್ರಥಮದಿನವು ಪ್ರಾರಂಭವಾಗುವ ಮೊದಲೇ ಅದರ ಎಲ್ಲಾ ದಿನಗಳು ನಿನ್ನ ಪುಸ್ತಕದಲ್ಲಿ ಬರೆಯಲ್ಪಟ್ಟವು"** – ಕೀರ್ತನೆ 139;14–16.

* * * * * *